# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮಾರ್ಚ್ 29, 2022

ಸಂಪುಟ : 48 ಸಂಚಿಕೆ : 318 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಎಸ್ಸೆಸ್ಸೆಲ್ಸಿ ಪರೀಕ್ಷೆ ಶುಭಾರಂಭ

## ಹಿಜಾಬ್ ಗೊಂದಲವಿಲ್ಲದೇ ಪೂರ್ಣಗೊಂಡ ಮೊದಲ ದಿನದ ಪರೀಕ್ಷೆ

ಬೆಂಗಳೂರು, ಮಾ. 28 - ಧಾರ್ಮಿಕ ಪ್ರಚೋದನೆಗಳಿಗೆ ಮಹತ್ವ ನೀಡದೆ, ವಿದ್ಯಾರ್ಥಿ ಗಳು ತಮ್ಮ ಭವಿಷ್ಯದ ಕಡೆ ಗಮನಹರಿಸಿ, ಸೋಮವಾರ ಆರಂಭವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೆ ಉತ್ಸಾಹದಿಂದ ಹಾಜರಾದರು.

ಏಪ್ರಿಲ್ 11ರವರೆಗೆ ಈ ಪರೀಕ್ಷೆಗಳು ನಡೆಯಲಿದ್ದು, ರಾಜ್ಯಾದ್ಯಂತ 8 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಸರ್ಕಾರದ ನಿಯಮಾವಳಿ ಪಾಲಿಸುವ ಮೂಲಕ ಸಮವಸ್ತ್ರ ಧರಿಸಿ ಪರೀಕ್ಷೆ ಬರೆದರು.

ಧಾರ್ಮಿಕ ಸಂಕೇತ ಸಾರುವ ಉಡುಪು ಧರಿಸಿ ತರಗತಿಗಳಿಗೆ ಹಾಜರಾಗುವ ಸಂಬಂಧ ರಾಜ್ಯ ಹೈಕೋರ್ಟ್ ತೀರ್ಪಿನ ನಂತರ ನಡೆದ ಮೊದಲ ಸಾರ್ವಜನಿಕ ಪರೀಕ್ಷೆ ಇದಾಗಿದೆ.

ಒಂದು ವರ್ಗದ (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ 22,030 ವಿದ್ಯಾರ್ಥಿಗಳಿಂದ ಪರೀಕ್ಷೆ



### 286 ವಿದ್ಯಾರ್ಥಿಗಳು ಗೈರು

ದಾವಣಗೆರೆ, ಮಾ. 28- ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಗಮವಾಗಿ ಆರಂಭ ಗೊಂಡಿತು. ಪ್ರಥಮ ಭಾಷೆ ಕನ್ನಡ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದ 22,316 ವಿದ್ಯಾರ್ಥಿಗಳ ಪೈಕಿ 22,030 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 286 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಜಿಲ್ಲೆಯಲ್ಲಿ ಪ್ರಥಮವಾಗಿ ಪರೀಕ್ಷೆಗೆ 22,272 ವಿದ್ಯಾರ್ಥಿಗಳು ನೋಂದಾಯಿಸಿ ಕೊಂಡಿದ್ದರು. ಈ (2ನೇ ಪುಟಕ್ಕೆ)

## ಕಟ್ಟಡ-ರಸ್ತೆಗೆ ಏಕರೂಪದ ದರ ಪಟ್ಟಿ ಜಾರಿ

ಬೆಂಗಳೂರು, ಮಾ. 28 - ಕಟ್ಟಡ ಮತ್ತು ರಸ್ತೆ ನಿರ್ಮಾಣಕ್ಕೆ ರಾಜ್ಯಾದ್ಯಂತ ಏಕರೂಪ ದರ ಪಟ್ಟಿ ಜಾರಿ ಮಾಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ್ ವಿಧಾನಸಭೆಗೆ ಇಂದು ತಿಳಿಸಿದರು. 2022-23ನೇ ಸಾಲಿನ (2ನೇ ಪುಟಕ್ಕೆ)

## ಸಿಇಟಿ ಪರೀಕ್ಷೆ

ಬೆಂಗಳೂರು, ಮಾ. 28 - ವೃತ್ತಿ ಶಿಕ್ಷಣಕ್ಕೆ ಪ್ರವೇಶಾವಕಾಶ ಕಲ್ಪಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಯನ್ನು ಜೂನ್ 16, 17 ಮತ್ತು 18ರಂದು ನಡೆಸಲು ಉದ್ದೇಶಿಸಲಾಗಿದೆ ಎಂದು ಉನ್ನತ (2ನೇ ಪುಟಕ್ಕೆ)


STUDENTS WHO APPEAR FOR S.S.L.C EXAMS GREETINGS FOR YOUR BRIGHT FUTURE.




'ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾದ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುತ್ತಿರುವ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಶುಭವಾಗಲಿ'.

ಶಶಿಕಲಾ ಇ.ಆರ್
ಅಧ್ಯಕ್ಷರು
ಶಶಿ ಎಜುಕೇಶನಲ್ ಟ್ರಸ್ಟ್ ದಾವಣಗೆರೆ

2022-23ನೇ ಶೈಕ್ಷಣಿಕ ಸಾಲಿಗೆ ದಾಖಲಾಗುವ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸುವರ್ಣ ಅವಕಾಶ. . . . .

ನಮ್ಮ ಕಾಲೇಜಿಗೆ ಪ್ರಸ್ತುತ ವರ್ಷದಲ್ಲಿ ಪ್ರಥಮ ಪಿಯುಸಿಗೆ ದಾಖಲಾಗುವ ವಿದ್ಯಾರ್ಥಿಯು ತಮ್ಮ ಸ್ನೇಹಿತರನ್ನು ಜೊತೆಯಲ್ಲಿ ದಾಖಲಾತಿ ಮಾಡಿಸಿದರೆ ಇಬ್ಬರಿಗೂ ಕಾಲೇಜು ಶುಲ್ಕದಲ್ಲಿ ರಿಯಾಯಿತಿ ಕೊಡಲಾಗುತ್ತದೆ.

ಈ ಕೂಡಲೇ ಸಂಪರ್ಕಿಸಿ .......

There is a golden Opportunity for First PUC aspirants,for those who Secured 90% and above in their S.S.L.C EXAMINATION

ADMISSIONS OPEN FOR KG TO PUC 2022-23

Scan QR code for Campus View

Rigister Now!


YOGI RAM
SHASHI EDUCATIONAL TRUST(R)
LALITHA PRE-UNIVERSITY COLLEGE
LALITHA INTERNATIONAL PUBLIC SCHOOL
Contact No::7022004042,9980629965,7022004109 Lokikere Main Road,Davanagere-577005
website:lalithainternational.in E-mail:lalitha.school@yahoo.com


## ಅಲ್ಪಸಂಖ್ಯಾತರ ಗುರುತಿಸುವ ಮಾರ್ಗಸೂಚಿಗೆ ಸುಪ್ರೀಂ ಸೂಚನೆ

ನವದೆಹಲಿ, ಮಾ. 28 – ಹತ್ತು ರಾಜ್ಯಗಳಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ಹಿಂದೂಗಳನ್ನು ಅಲ್ಪಸಂಖ್ಯಾತರೆಂದು ಗುರುತಿಸಬೇಕೆಂಬ ಅರ್ಜಿಯ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಅಲ್ಪಸಂಖ್ಯಾತರ ಘೋಷಣೆ ಬಗ್ಗೆ ಮಾರ್ಗಸೂಚಿ ರೂಪಿಸಲು ಕೇಂದ್ರ ಸರ್ಕಾರಕ್ಕೆ ನಾಲ್ಕು ವಾರಗಳ ಸಮಯ ನೀಡಿದೆ.

ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಹಾಗೂ ಎಂ.ಎಂ. ಸುಂದರೇಶ್ (5ನೇ ಪುಟಕ್ಕೆ)


ಶಿಂಗ್ರಿಹಳ್ಳಿ ಗ್ರಾಮದ ಶ್ರೀ ಕಾಳೇರ ಬಾಲಪ್ಪ ನಿಧನ



ಹರಪನಹಳ್ಳಿ ತಾಲ್ಲೂಕು ಶಿಂಗ್ರಿಹಳ್ಳಿ ಗ್ರಾಮದ ವಾಸಿಯಾದ
ಶ್ರೀ ಕಾಳೇರ ಬಾಲಪ್ಪ
ಇವರು ದಿನಾಂಕ 28.03.2022ರ ಸೋಮವಾರ ಬೆಳಿಗ್ಗೆ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.3.2022ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಶಿಂಗ್ರಿಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತರು

ಶ್ರೀಮತಿ ಕಾಳೇರ ಕೆಂಚಮ್ಮ ಮತ್ತು ಮಕ್ಕಳು
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಹಾಗೂ ಶಿಂಗ್ರಿಹಳ್ಳಿ ಗ್ರಾಮಸ್ಥರು.
91640 26444, 80732 91243, 80733 15054



॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ




ದಾವಣಗೆರೆ ಜಿಲ್ಲೆ, ತಾಲ್ಲೂಕು, ಹರಿಹರದ ವಾಸಿ
ಶ್ರೀಮತಿ ಸುಪ್ರಿಯಾ ಶ್ರೀ ಜಿ. ಗಿರೀಶ್ ಬೆಳಕೆರೆ
ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ : 25.03.2022ನೇ ಶುಕ್ರವಾರ ನಮ್ಮ ಪೂಜ್ಯ ತಂದೆಯವರಾದ
ಶ್ರೀ ಜಿ. ಶೇಖರಪ್ಪ ಬೆಳಕೆರೆ
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 29.03.2022ನೇ ಮಂಗಳವಾರದಂದು ಬೆಳಿಗ್ಗೆ : 10.30ಕ್ಕೆ ಎಸ್.ಎಸ್. ಮಿನಿ ಹಾಲ್, ಹದಡಿ ರಸ್ತೆ, ದಾವಣಗೆರೆ.
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು :
ಶ್ರೀಮತಿ ಸುಪ್ರಿಯಾ ಶ್ರೀ ಜಿ. ಗಿರೀಶ್ ಬೆಳಕೆರೆ, ಹರಿಹರ.
ಶ್ರೀಮತಿ ಜಿ. ಲೀಲಾ ಶ್ರೀ ಜಿ. ರಾಜಪ್ಪ, ಬೆಂಗಳೂರು.
ಶ್ರೀಮತಿ ಜಿ. ಸುನೀತಾ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ, ಬೆಂಗಳೂರು.
ಗೌಡ್ರು ಗುರುಸಿದ್ದಪ್ಪರ ವಂಶಸ್ಥರು, ಹಳ್ಳದಕೇರಿ-ಹರಿಹರ ಹಾಗೂ ಬಂಧುಗಳು-ಮಿತ್ರರು. ಫೋ. : 80738 73603

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



85ನೇ
ಹುಟ್ಟು ಹಬ್ಬದ ಶುಭಾಶಯಗಳು



ಶ್ರೀ ಯಜಮಾನ್ ಮೋತಿ ವೀರಣ್ಣ (ಮಾಜಿ ಶಾಸಕರು)

ಶುಭಕೋರುವವರು :
ಯಜಮಾನ್ ರಾಜೇಂದ್ರ – ಯಜಮಾನ್ ರಾಜೇಶ್ವರಿ – ಯಜಮಾನ್ ರುದ್ರಪ್ರಸಾದ್
ಯಜಮಾನ್ ಅಧಿತ್ಯ, ಯಜಮಾನ್ ಆರ್ಯನ್,
ಯಜಮಾನ್ ನಾರಾಯಣಿ ಅಲೋಕ್ ಮೋತಿಕಾನೆ,
ನಿಹಾರೀಕ ಮೋತಿಕಾನೆ ಮತ್ತು ಯಜಮಾನ್ ಮೋತಿ ವಂಶಸ್ಥರು, ಬಂಧು ಮಿತ್ರರು

## ಎಸ್ಸೆಸ್ಸೆಲ್ಸಿ ಪರೀಕ್ಷೆ ಶುಭಾರಂಭ

**(1ನೇ ಪುಟದಿಂದ)** ವಿದ್ಯಾರ್ಥಿಗಳು ಪೂರ್ಣ ಪ್ರಮಾಣದಲ್ಲಿ ಪರೀಕ್ಷೆಗೆ ಹಾಜರಾಗುವರೇ, ಇಲ್ಲವೇ ಎಂಬ ಚರ್ಚೆ ನಡೆದಿತ್ತು.

ನ್ಯಾಯಾಲಯದ ತೀರ್ಪಿನ ನಂತರ ಕೆಲವು ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೂ ತೆರಳಿರಲಿಲ್ಲ, ಆದರೆ, ಇಂದು ಈ ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲಾ ವರ್ಗದವರೂ ಯವುದೇ ಆಕ್ಷೇಪ ಇಲ್ಲದೆ ಪರೀಕ್ಷೆ ಬರೆದರು.ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಧಾರ್ಮಿಕ ಸಂಕೇತದ ಉಡುಪು ಧರಿಸಿ ಪರೀಕ್ಷೆಗೆ ಹಾಜರಾಗಲು ಮುಂದಾದರಾದರೂ, ಶಿಕ್ಷಣ ಇಲಾಖೆ ಅಧಿಕಾರಿಗಳು ಈ ವಿದ್ಯಾರ್ಥಿಗಳ ಮನವೊಲಿಸಿದಾಗ ನಿಯಮಾವಳಿಯಂತೆ ಪರೀಕ್ಷೆಗೆ ಹಾಜರಾಗಲು ಸಮ್ಮತಿಸಿದರು.

ಇಂತಹ ಸಣ್ಣ-ಪುಟ್ಟ ಘಟನೆಗಳನ್ನು ಹೊರತುಪಡಿಸಿ, ಎಲ್ಲಿಯೂ ಯಾವುದೇ ಗೊಂದಲ ಎದುರಾಗಲಿಲ್ಲ. ಕೋವಿಡ್-19 ನಿಯಮಾವಳಿಗಳನ್ನು ಎಲ್ಲೆಡೆ ಚಾಚೂ ತಪ್ಪದೇ ಪಾಲಿಸಿ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಿ ಪರೀಕ್ಷೆ ಬರೆಯುವಂತೆ ಮಾಡುವಲ್ಲಿ ಶಾಲಾ ಆಡಳಿತ ಮಂಡಳಿಗಳು ಶ್ರಮಿಸಿದವು.

ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣ ಪೂರ್ಣ ಪ್ರಮಾಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳು ಕೋವಿಡ್‌ನಿಂದಾಗಿ 8 ಮತ್ತು 9ನೇ ತರಗತಿಗಳ ಪರೀಕ್ಷೆ ಬರೆಯಲಾಗದೆ ಬಡ್ತಿ ಪಡೆದಿದ್ದರು.

ಇದನ್ನರಿತ ಸರ್ಕಾರ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಶಾಲಾ ಹಾಗೂ ಸಾರ್ವಜನಿಕವಾಗಿ ಪೂರ್ವ ಸಿದ್ಧತಾ ಪರೀಕ್ಷೆಗಳ ಮೂಲಕ ಮಾನಸಿಕ ಸ್ಥೈರ್ಯ ತುಂಬುವ ಕೆಲಸ ಮಾಡಿತ್ತು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲೂ ಪಠ್ಯಕ್ರಮಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ಶೇ. 25ರಷ್ಟು ಪಠ್ಯ ಕ್ರಮವನ್ನು ಪರೀಕ್ಷೆಯಿಂದ ಕೈಬಿಡಲಾಗಿತ್ತು. ಪರೀಕ್ಷೆಗಳು ಸುಗಮವಾಗಿ ಆರಂಭವಾಗಿದ್ದರಿಂದ ಸರ್ಕಾರಕ್ಕೂ ನೆಮ್ಮದಿ ತಂದಿದೆ, ಯಾವುದೇ ಗೊಂದಲಗಳಿಲ್ಲದೆ ಪರೀಕ್ಷೆಗಳು ನಡೆಯುತ್ತಿರುವುದನ್ನು ಅರಿತ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣ, ವೃತ್ತಿ ಶಿಕ್ಷಣ ಪ್ರವೇಶ ಪರೀಕ್ಷೆ (ಸಿಇಟಿ)ಯ ತಾತ್ಕಾಲಿಕ ವೇಳಾಪಟ್ಟಿಯನ್ನೂ ಪ್ರಕಟಿಸಿದರು.

## 22,030 ವಿದ್ಯಾರ್ಥಿಗಳಿಂದ ಪರೀಕ್ಷೆ

**(1ನೇ ಪುಟದಿಂದ)** ಪೈಕಿ 277 ವಿದ್ಯಾರ್ಥಿಗಳು ಹಾಗೂ 44 ಪುನರಾವರ್ತಿತ ಅಭ್ಯರ್ಥಿಗಳ ಪೈಕಿ 9 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಈ ಪೈಕಿ ದಾವಣಗೆರೆ ದಕ್ಷಿಣ ವಲಯದಲ್ಲಿಯೇ ಅತಿ ಹೆಚ್ಚು ಅಂದರೆ 149 ವಿದ್ಯಾರ್ಥಿಗಳು ಪರೀಕ್ಷೆ ಬರೆದಿಲ್ಲ.

ಚನ್ನಗಿರಿ ತಾಲ್ಲೂಕಿನಲ್ಲಿ ಹೆಸರು ನೋಂದಾಯಿಸಿದ 3725 ವಿದ್ಯಾರ್ಥಿಗಳ ಪೈಕಿ 18 ಜನ ಗೈರಾಗಿದ್ದಾರೆ. ದಾವಣಗೆರೆ ಉತ್ತರ ವಲಯದಲ್ಲಿ 3417 ವಿದ್ಯಾರ್ಥಿಗಳ ಪೈಕಿ 26, ದಕ್ಷಿಣ ವಲಯದಲ್ಲಿ 6414 ವಿದ್ಯಾರ್ಥಿಗಳ ಪೈಕಿ 149, ಹರಿಹರ ತಾಲ್ಲೂಕಿನಲ್ಲಿ ನೋಂದಣಿ ಯಾಗಿದ್ದ 3213 ವಿದ್ಯಾರ್ಥಿಗಳ ಪೈಕಿ 33, ಹೊನ್ನಾಳಿಯ 3118 ವಿದ್ಯಾರ್ಥಿಗಳ ಪೈಕಿ 40 ಹಾಗೂ ಜಗಳೂರು ತಾಲ್ಲೂಕಿನಲ್ಲಿ ನೋಂದಾಯಿಸಿಕೊಂಡಿದ್ದ 2429 ವಿದ್ಯಾರ್ಥಿಗಳ ಪೈಕಿ 20 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಜಿಲ್ಲೆಯ 90 ಪರಿಕ್ಷಾ ಕೇಂದ್ರಗಳ 1256 ಕೊಠಡಿಗಳಲ್ಲಿ ಪರೀಕ್ಷೆ ನಡೆಯಿತು. 9 ಉಪ ಮುಖ್ಯ ಅಧೀಕ್ಷಕರು, ಪ್ರತಿ ಕೇಂದ್ರಕ್ಕೂ ಒಬ್ಬರಂತೆ 90 ಸ್ಥಾನಿಕ ಜಾಗೃತ ದಳ ನಿಯೋಜಿಸಲಾಗಿತ್ತು.

ದಾವಣಗೆರೆ ಉತ್ತರ ವಲಯದ ಎರಡು ಶಾಲೆಗಳಲ್ಲಿ ಹಿಜಾಬ್ ಧರಿಸಿ ಪರೀಕ್ಷೆಗೆ ಆಗಮಿಸಿದ್ದ ಕೆಲ ವಿದ್ಯಾರ್ಥಿಗಳ ಮನವೊಲಿಸಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡಲಾಗಿದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಧಾರ್ಮಿಕ ಉಡುಗೆಗೆ ಸಂಬಂಧಿಸಿದಂತೆ ಯಾವುದೇ ಅಡೆ-ತಡೆ ಉಂಟಾಗದಂತೆ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯ್ತಿ ಸಿಇಒ, ಎಸ್ಪಿ ಅವರುಗಳು ಯಾವುದೇ ರೀತಿಯ ಅಡೆ ತಡೆಗಳು ಉಂಟಾಗದಂತೆ ಮುತುವರ್ಜಿ ವಹಿಸಿದ್ದರು. ನಾವೂ ಸಹ ಎಚ್ಚರಿಕೆ ವಹಿಸಿದ್ದೆವು. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಶಾಂತಯುತವಾಗಿ ಪರೀಕ್ಷೆ ಆರಂಭವಾಗಿದೆ ಎಂದು ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ ಪತ್ರಿಕೆಗೆ ಹೇಳಿದರು.

## ನಾಡಿದ್ದು ಮೂಳೆ, ಕೀಲು ಉಚಿತ ತಪಾಸಣೆ

ದಾವಣಗೆರೆ, ಮಾ.28- ಎಸ್‌ಎಸ್‌ಐಎಂಎಸ್ ಸ್ಪರ್ಶ್ ಆಸ್ಪತ್ರೆಯ ಖ್ಯಾತ ಕೀಲು-ಮೂಳೆ ತಜ್ಞ ಡಾ. ರವಿಕುಮಾರ್ ಮೂಕರ್ತಿಹಾಳ್ ಅವರು ನಾಡಿದ್ದು ದಿನಾಂಕ 31ರಂದು ನಗರಕ್ಕೆ ಆಗಮಿಸಲಿದ್ದಾರೆ. ಅಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3ರವರೆಗೆ ಇಲ್ಲಿನ ಎಂಸಿಸಿ ಎ ಬ್ಲಾಕ್‌ನಲ್ಲಿರುವ ಎಸ್.ಎಸ್. ಸ್ಪೆಷಾಲಿಟಿ ಕ್ಲಿನಿಕ್‌ನಲ್ಲಿ ಮೂಳೆ ಹಾಗೂ ಕೀಲು ಮರುಜೋಡಣಾ ಉಚಿತ ತಪಾಸಣಾ ಶಿಬಿರ ಹಾಗೂ ಔಷಧಿ ವಿತರಣೆ ನಡೆಯಲಿದೆ. ಹೆಸರು ನೋಂದಣಿಗೆ ಸಂಪರ್ಕಿಸಿ : ಮೊ: 9686929090, 9019262025.

# ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಸ್ನಾತಕೋತ್ತರ ಕೇಂದ್ರ ಸ್ಥಾಪಿಸಿ

### ಹರಪನಹಳ್ಳಿಯಲ್ಲಿ ಕಾರ್ಮಿಕ ಸಂಘಟನೆಗಳಿಂದ ಬೃಹತ್ ಪ್ರತಿಭಟನೆ




ಹರಪನಹಳ್ಳಿ, ಮಾ. 28- ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ, ಪಟ್ಟಣದಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಕೇಂದ್ರೀಯ ಜಂಟಿ ಕಾರ್ಮಿಕ ಸಂಘಟನೆ ತಾಲ್ಲೂಕು ಘಟಕದ ಆಶ್ರಯದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಇಲ್ಲಿನ ಪ್ರವಾಸಿ ಮಂದಿರ ವೃತ್ತದಿಂದ ಹೊಸಪೇಟೆ ರಸ್ತೆ ಮೂಲಕ ಇಜಾರಿ ಶಿಸರಪ್ಪ ವೃತ್ತಕ್ಕೆ ಆಗಮಿಸಿ ಬಹಿರಂಗ ಸಭೆ ನಡೆಸಿದರು.

ಅಂಗನವಾಡಿ ಮತ್ತು ಆಶಾ ಹಾಗೂ ಬಿಸಿಯೂಟ ಕಾರ್ಯಕರ್ತರಿಗೆ ಕನಿಷ್ಟ 21 ಸಾವಿರ ರೂ.ಗಳ ವೇತನ ನೀಡಬೇಕು. ರಾಷ್ಟ್ರೀಯ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸಲು ಶ್ರೀಮಂತರಿಗೆ ಆಸ್ತಿ ತೆರಿಗೆ ಇತ್ಯಾದಿಗಳನ್ನು ವಿಧಿಸುವ ಮೂಲಕ ಕೃಷಿ, ಶಿಕ್ಷಣ, ಆರೋಗ್ಯ ಮತ್ತು ಇತರೆ ನಿರ್ಣಾಯಕ ಸಾರ್ವಜನಿಕ ಸೇವೆಗಳಿಗೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು. ಪೆಟ್ರೋಲಿಯಂ ಉತ್ಪನ್ನದ ಮೇಲಿನ ಕೇಂದ್ರೀಯ ಅಬಕಾರಿ ಸುಂಕವನ್ನು ಕಡಿಮೆ ಮಾಡುವುದು ಮತ್ತು ಬೆಲೆ ಏರಿಕೆಯನ್ನು ನಿಗ್ರಹಿಸಲು ದೃಢವಾದ ಪರಿಹಾರ ಕ್ರಮ ಕೈಗೊಳ್ಳುವುದು, ಹರಪನಹಳ್ಳಿಯಲ್ಲಿ ಬಡ ಹಿಂದುಳಿದ ಕಾರ್ಮಿಕರ ಮಕ್ಕಳ ಉನ್ನತ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಸ್ನಾತಕೋತ್ತರ ಕೇಂದ್ರ ಸ್ಥಾಪನೆ ಮಾಡಬೇಕು. ಹರಪನಹಳ್ಳಿಯಲ್ಲಿ ಇಎಸ್ ಐ ಆಸ್ಪತ್ರೆ ಸ್ಥಾಪನೆ ಮಾಡಬೇಕು, ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೆ ಪಿಂಚಣಿ ಯೋಜನೆ ಜಾರಿಗೊಳಿಸಬೇಕು. ಹರಪನಹಳ್ಳಿಯಲ್ಲಿ ಕಾರ್ಮಿಕ ಭವನ ಸ್ಥಾಪನೆ ಮಾಡಬೇಕು, ಕರ್ನಾಟಕ ರಾಜ್ಯ ಟೈಲರ್ ಮಂಡಳಿ ಸ್ಥಾಪನೆ ಮಾಡಬೇಕು, ದೇವದಾಸಿ ಮಕ್ಕಳ ಕಲ್ಯಾಣ ಮಂಡಳಿ ಸ್ಥಾಪನೆ ಮಾಡಬೇಕು , ಮಾಜಿ ದೇವದಾಸಿಯರಿಗೆ 3 ಎಕರೆ ಜಮೀನು, ಮನೆ ನಿರ್ಮಾಣಕ್ಕೆ 5 ಲಕ್ಷ ರೂ.ನೀಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ಅವರು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಸಂಘಟನೆಯ ಮುಖಂಡರಾದ ಟಿ.ವಿ. ರೇಣುಕಮ್ಮ, ಗುಡಿಹಳ್ಳಿ ಹಾಲೇಶ್, ಬಳಿಗಾನೂರು ಕೊಟ್ರೇಶ್, ಹೆಚ್. ವೆಂಕಟೇಶ, ಹುಲಿಕಟ್ಟಿ ರಹಮತ್, ಬಿ. ಹನುಮಂತಪ್ಪ, ದಾದಾಪೀರ್, ಭರಮಪ್ಪ ಸೇರಿದಂತೆ ಅಂಗನವಾಡಿ, ಆಶಾ ಕಾರ್ಯಕರ್ತರು ಪಾಲ್ಗೊಂಡಿದ್ದರು.

## ಅಪಾರ ಶಕ್ತಿ ಹೊಂದಿರುವ ಗಾಯತ್ರಿ ಮಂತ್ರ



**ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ವೀರಾಪುರ ಹಿರೇಮಠದ ಶ್ರೀ ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು**

ರಾಣೇಬೆನ್ನೂರು,ಮಾ.28- ಗಾಯತ್ರಿ ಮಂತ್ರದಲ್ಲಿ ಅಪಾರ ಶಕ್ತಿಯಿದ್ದು ಪ್ರತಿದಿನ ಪಠಿಸುವುದರಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ಲಭಿಸುತ್ತದೆ ಎಂದು ವೀರಾಪುರ ಹಿರೇಮಠದ ಶ್ರೀ ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು ನುಡಿದರು.

ಬಿಎಜೆಎಸ್‌ಎಸ್ ಕಾಲೇಜಿನ ಆವರಣದಲ್ಲಿ ಭಾನುವಾರ ಬಿಎಜೆಎಸ್‌ಎಸ್ ಕಾಲೇಜು ಹಾಗೂ ಗಾಯತ್ರಿ ಸಮೂಹದ ವತಿಯಿಂದ ಜರುಗಿದ ಕೋಟಿ ಗಾಯತ್ರಿ ಮಹಾಯಜ್ಞದ 16ನೇ ವಾರ್ಷಿಕೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಗಾಯತ್ರಿ ಮಂತ್ರ ಪ್ರಾಣಾಯಾಮದಂತಿದ್ದು ಪ್ರತಿದಿನ ಪಠಣ ಮಾಡಿದಲ್ಲಿ ಯೋಗ ಮಾಡುವುದು ಅವಶ್ಯವಿಲ್ಲ. ಇದು ಮಕ್ಕಳಲ್ಲಿ ಸ್ಮರಣ ಶಕ್ತಿಯನ್ನು ಹೆಚ್ಚಿಸುತ್ತದೆ. ಇದರಿಂದ ದೇಹದ ಎಲ್ಲಾ ನರನಾಡಿಗಳು ಏಕಾಗ್ರತೆ ಹೊಂದಿ ಮನಸ್ಸಿಗೆ ಶಾಂತಿ ದೊರಕುವ ಜತೆಗೆ ಎಲ್ಲಾ ಕಷ್ಟ-ಕಾರ್ಪಣ್ಯಗಳನ್ನು ನಿವಾರಿಸಿ ಬುದ್ಧಿಶಕ್ತಿ ವಿಕಸವಾಗುತ್ತದೆ ಎಂದರು.

ಸ್ಥಳೀಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಪ್ರಕಾಶಾನಂದ ಮಹಾರಾಜ್, ಒಡಿಸಾದ ಶ್ರೀ ಜಗನ್ನಾಥಪುರಿ ಸ್ವಾಮೀಜಿ, ಶ್ರೀ ಶಂಕರಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು.

ಮಾಜಿ ಸಚಿವ ರುದ್ರಪ್ಪ ಲಮಾಣಿ, ಆಡಳಿತಾಧಿಕಾರಿ ಡಾ. ಆರ್.ಎಂ. ಕುಬೇರಪ್ಪ, ಸುರೇಶ ಬಣಕಾರ, ಎಸ್.ಎ. ತಾಂಬೆ, ಪ್ರೊ.ಕೆ.ಕೆ. ಹಾವಿನಾಳ, ದತ್ತಾತ್ರೇಯ ನಾಡಿಗೇರ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಹರಿಹರ ತಾ.ನಲ್ಲಿ ಶಾಂತಿಯುತ ಎಸ್ಸೆಸ್ಸೆಲ್ಸಿ ಪರೀಕ್ಷೆ



ಹರಿಹರ, ಮಾ. 28 - ನಗರದ ಡಿ.ಆರ್.ಎಂ. ಎಂ.ಕೆ.ಇ.ಟಿ., ಬಾಪೂಜಿ, ಎಂ.ಆರ್.ಬಿ. ಪ್ರೌಢಶಾಲಾ ಮತ್ತು ಗ್ರಾಮೀಣ ಪ್ರದೇಶದ 6 ಪ್ರೌಢಶಾಲಾ ಪರೀಕ್ಷಾ ಕೇಂದ್ರದಲ್ಲಿ ಎಸ್ಸೆಸ್ಸೆಲ್ಸಿ ಕನ್ನಡ ಪ್ರಶ್ನೆ ಪತ್ರಿಕೆಯ ಪರೀಕ್ಷೆ ಶಿಸ್ತು ಬದ್ಧ ಮತ್ತು ಶಾಂತಿಯುತವಾಗಿ ನಡೆಯಿತು.

ಈ ವೇಳೆ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ಮಾತನಾಡಿ, 1551 ವಿದ್ಯಾರ್ಥಿಗಳು ಮತ್ತು 1655 ವಿದ್ಯಾರ್ಥಿನಿಯರು 11 ಪರೀಕ್ಷಾ ಕೇಂದ್ರಗಳಲ್ಲಿ ಕನ್ನಡ ಪ್ರಶ್ನೆ ಪತ್ರಿಕೆಯ ಪರೀಕ್ಷೆಯನ್ನು ಬರೆದಿದ್ದಾರೆ. ಸರ್ಕಾರಿ ಪ್ರೌಢಶಾಲಾ 5 ಅನುದಾನಿತ ಶಾಲೆ 6 ಸೇರಿದಂತೆ ಒಟ್ಟು11 ಶಾಲೆಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 225 ಶಿಕ್ಷಕರು ಪರೀಕ್ಷಾ ಕೊಠಡಿಯ ಮೇಲ್ವಿಚಾರಕರು 11, ಮೊಬೈಲ್ ಸ್ವಾಧೀನಾಧಿಕಾರಿಗಳು, ಪರೀಕ್ಷಾ ಕೇಂದ್ರದಲ್ಲಿ ಆರೋಗ್ಯ ಸಹಾಯಕರಿಂದ ಆರೋಗ್ಯ ತಪಾಸಣೆ ಮಾಡಿಸಲಾಗಿದೆ ಎಂದು ಹೇಳಿದರು.

ನಗರದ ಡಿ.ಆರ್.ಎಂ. ಮತ್ತು ಎಂ.ಕೆ.ಇ.ಟಿ. ಪ್ರೌಢಶಾಲೆಯ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ. ರಿಷ್ಯಂತ್ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರರ ಕೆ.ಬಿ. ರಾಮಚಂದ್ರಪ್ಪ, ಸಿಪಿಐ ಸತೀಶ್ ಕುಮಾರ್, ಎಸ್.ಎಸ್.ಎಲ್.ಸಿ. ಪರೀಕ್ಷೆ ನೋಡಲ್ ಅಧಿಕಾರಿ ಮಂಜುನಾಥ್, ಆರೋಗ್ಯ ಇಲಾಖೆಯ ಡಾ ಚಂದ್ರಮೋಹನ್, ತಾ.ಪಂ. ಇ.ಓ ಗಂಗಾಧರನ್, ಸರ್ಕಾರಿ ನೌಕರರ ಸಂಘದ ಖಜಾಂಚಿ ಶಿವಮೂರ್ತಿ, ಪಿಎಸ್ಐ ಸುನೀಲ್ ಬಸವರಾಜ್, ಗುತ್ತೂರು ಗ್ರಾಮಾಂತರ ಠಾಣೆಯ ಪಿಎಸ್ಐ ವೀರಬಸಪ್ಪ ಕುಸಲಾಪುರ, ಮಲೇಬೆನ್ನೂರು ಪಿಎಸ್ಐ ಡಿ. ರವಿಕುಮಾರ್, ಎ.ಎಸ್.ಐ. ವಿಜಯಕುಮಾರ್, ಪೊಲೀಸ್ ಸಿಬ್ಬಂದಿಗಳಾದ ಮುರುಳಿಧರ್, ಸಿದ್ದಪ್ಪ, ಸತೀಶ್ ಮತ್ತಿತರರು ಹಾಜರಿದ್ದರು.

## ಯಲವಟ್ಟಿಯಲ್ಲಿ ಸಂಭ್ರಮದ ರಥೋತ್ಸವ



ಮಲೇಬೆನ್ನೂರು, ಮಾ.28- ಯಲವಟ್ಟಿ ಗ್ರಾಮದ ಶ್ರೀ ಆಂಜ ನೇಯ ಸ್ವಾಮಿಯ ರಥೋತ್ಸವ ಭಾನುವಾರ ಬ್ರಾಹ್ಮೀ ಮುಹೂರ್ತ ದಲ್ಲಿ ಸಂಭ್ರದಿಂದ ಜರುಗಿತು. ಜಿಗಳಿ ರಂಗನಾಥ ಸ್ವಾಮಿ ದೇವರ ಒಡನಾಡಿ ಸಕಲ ಬಿರುದಾವಳಿಗ ಳೊಂದಿಗೆ ನಡೆದ ರಥೋತ್ಸವಕ್ಕೆ ವಿವಿಧ ಕಲಾ-ಮೇಳಗಳು ಮೆರುಗು ತಂದವು. ಭಕ್ತರು ರಥೋತ್ಸವ ವೇಳೆ ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ಸಂಜೆ ನಡೆದ ಶ್ರೀ ಸ್ವಾಮಿಯ ಮುಳ್ಳೋತ್ಸವದಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು. ಹರಕೆ ಹೊತ್ತ ಭಕ್ತರು ಮುಳ್ಳು ತುಳಿದರು. ನಂತರ ಓಕಳಿ, ಭೂತನ ಸೇವೆಯೊಂದಿಗೆ ಜಾತ್ರೆಗೆ ತೆರೆ ಎಳೆಯಲಾಯಿತು.

## ವಿಧಾನಸೌಧದಿಂದಾಚೆ ಬಂದು ಮಾತನಾಡಲಿ

### ಸಿದ್ದರಾಮಯ್ಯಗೆ ಧಾರುಕೇಶ್ವರಯ್ಯ ಸವಾಲು

ದಾವಣಗೆರೆ, ಮಾ.28- ಬೇಡ ಜಂಗಮರ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರ ಸಂಬಂಧ ವಿಧಾನ ಸೌಧದಿಂದಾಚೆ ಬಂದು ತಾಕತ್ತಿದ್ದರೆ ಮಾತನಾಡಲಿ ಎಂದು ಅಖಿಲ ಕರ್ನಾಟಕ ಡಾ. ಅಂಬೇಡ್ಕರ್ ಬೇಡಜಂಗಮ ಪರಿಶಿಷ್ಟ ಜಾತಿ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಡಾ.ಎಂ.ಪಿ. ಧಾರಕೇಶ್ವರಯ್ಯ ಅವರು ವಿಪಕ್ಷ ಮುಖಂಡ ಸಿದ್ದರಾಮಯ್ಯ ಸೇರಿದಂತೆ ಹಲವು ಶಾಸಕರಿಗೆ ಸವಾಲು ಹಾಕಿದರು.

ಈವರೆಗೆ ಸಾವಿರಾರು ಜನರು ಬೇಡ ಜಂಗಮ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ಆದರೂ ವಿಧಾನಸಭಾ ಕಲಾಪದಲ್ಲಿ ಸದನದ ಒಳಗೆ ಮಾತನಾಡಿದರೆ ಪ್ರಕರಣ ದಾಖಲು ಮಾಡಲು ಸಾಧ್ಯವಿಲ್ಲ ಎನ್ನುವುದನ್ನು ತಿಳಿದಿದ್ದು, ಬಹಿರಂಗವಾಗಿ ಮಾತನಾಡುತ್ತಿಲ್ಲ.

ನಿಮಗೆ ತಾಕತ್ತಿದ್ದರೆ ಸದನದಿಂದ ಹೊರಬಂದು ಮಾತನಾಡಿ ಹೆಂಗಸರಂತೆ ಸದನದಲ್ಲಿ ಕುಳಿತು ಮಾತ ನಾಡಬೇಡಿ. ಏನೇ ಇದ್ದರೂ ದಾಖಲೆ ಸಮೇತ ನ್ಯಾಯಾಲಯದಲ್ಲಿ ಮಾತನಾಡಿ. ಅಲ್ಲಿ ಬಗೆಹರಿಸಿಕೊಳ್ಳಿ. ಇದೇ ರೀತಿ ಮಾತನಾಡಿದರೆ ನಿಮ್ಮ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲಾಗುವುದು ಎಂದು ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ರಾಜ್ಯ ಸರ್ಕಾರ ಈಗಾಗಲೇ ಹಲವು ಬಾರಿ ಸುತ್ತೋಲೆ ಹೊರಡಿಸಿ ವೀರಶೈವ ಲಿಂಗಾಯತ ಜಂಗಮರೇ ಬೇರೆ, ಬೇಡ ಜಂಗಮರೇ ಬೇರೆ ಎಂದು ತಿಳಿಸಿದೆ. ಬೇಡ ಜಂಗಮರೆಂದರೆ ಮಾದಕಪಾನಿ, ಗೋ ಮಾಂಸ ಬಿಟ್ಟು ಹಂದಿ ಮಾಂಸ ಸೇರಿದಂತೆ ಎಲ್ಲಾ ಮಾಂಸ ಸೇವನೆ ಮಾಡುವವರು ಎಂದು ಆದೇಶ ಹೊರಡಿಸಿದೆ. ಆದರೆ ವಿಧಾನ ಸಭಾ ಕಲಾಪದಲ್ಲಿ ವಿಪಕ್ಷದ ಮುಖಂಡ ಸಿದ್ದರಾಮಯ್ಯ, ಶಾಸಕರಾದ ಪಿ. ರಾಜೀವ್ ಕುಡುಚಿ, ಗೂಳಿಹಟ್ಟಿ ಶೇಖರ್, ಪ್ರಿಯಾಂಕ ಖರ್ಗೆ, ಎನ್. ಮಹೇಶ್, ಅನ್ನದಾನಿ ಇತರರು ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ಆದೇಶ ಉಲ್ಲಂಘನೆ ಮಾಡಿ, ಸದನಕ್ಕೆ ಸುಳ್ಳು ಮಾಹಿತಿ ನೀಡಿದ್ದಾರೆ. ಈ ಮೂಲಕ ಕಾನೂನಿಡಿ ಅಪರಾಧ ಎಸಗಿರುವ ಎಲ್ಲ ಶಾಸಕರನ್ನು ಸಭಾಪತಿಯವರು ಕೂಡಲೇ ವಜಾಗೊಳಿಸಬೇಕೆಂದು ಆಗ್ರಹಿಸಿದರು.

ಬೇಡ ಜಂಗಮ ಎಸ್ಸಿ ಸರ್ಟಿಫಿಕೇಟ್ ಪಡೆದೇ ನಾನು ಅನೇಕ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸಿದ್ದುಂಟು. ಆದರೆ ಎಸ್ಸಿ ಪ್ರಮಾಣ ಪತ್ರ ಪಡೆದು 10 ವರ್ಷವಾದರೂ ನಾನಾಗಲೀ, ನನ್ನ ಕುಟುಂಬವಾಗಲೀ ಯಾವುದೇ ಸೌಲಭ್ಯ ಪಡೆದಿಲ್ಲ. ನನ್ನ ಸಹೋದರ ಎಂ.ಪಿ. ರೇಣುಕಾಚಾರ್ಯಗೆ ಗೊತ್ತಿಲ್ಲದಂತೆ ಅವರ ಮಗಳು ಎಂ.ಆರ್.ಚೇತನಾಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಕೊಡಿಸಿದ್ದರೂ, ಯಾವುದೇ ಸವಲತ್ತು ಪಡೆದಿಲ್ಲ. 2017ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಹಾಗೂ ಹೆಚ್.ಆಂಜನೇಯ ಸಮಾಜ ಕಲ್ಯಾಣ ಇಲಾಖೆ ಸಚಿವರಿದ್ದಾಗ ವೀರಣ್ಣ ಹಿರೇಮಠ್ ಪುತ್ರ ಚೇತನ್ ಎಸ್ಸಿ ಪ್ರಮಾಣ ಪತ್ರದಡಿ 45 ಲಕ್ಷ ರೂ. ಸಹಾಯಧನ ಪಡೆದಿದ್ದು, ಈಗ ಸುಳ್ಳು ಆರೋಪ ಮಾಡುತ್ತಿರುವ ಇವರಿಗೆಲ್ಲಾ ನಾಚಿಕೆಯಾಗಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮದೇ ಪ್ರಕರಣಕ್ಕೆ ಸಂಬಂಧಿಸಿದಂತೆ 2021ರಲ್ಲಿ ಬೇಡ ಜಂಗಮ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡುವಂತೆ ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರರಿಗೆ ರಾಜ್ಯ ಉಚ್ಚ ನ್ಯಾಯಾಲಯ ಆದೇಶಿಸಿದೆ. ರಾಜ್ಯಾದ್ಯಂತ ಇರುವ ಎಲ್ಲಾ ತಹಶೀಲ್ದಾರರು, ಜಿಲ್ಲಾಧಿಕಾರಿಗಳು ಬೇಡ ಜಂಗಮ ಜಾತಿ ಜನರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಬೇಕು.

ತೀರ್ಪಿನ ಆದೇಶದಲ್ಲಿ ಬರುವ ಜಾತಿಗಳಿಗೆ ಪ್ರಮಾಣ ಪತ್ರ ನೀಡುವ ಜತೆ ಮಾನ್ಯತೆ ಮಾಡಿ ಅವರ ಕುಂದುಕೊರತೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು. ಅಲ್ಲದೇ ಸದಸ್ಯರು ಅರ್ಜಿ ಸಲ್ಲಿಸಿ ಆರು ವಾರದೊಳಗೆ ಪರಿಗಣಿಸಿ ಪ್ರಮಾಣ ಪತ್ರ ನೀಡಬೇಕೆಂದು ಆದೇಶ ನೀಡಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಬೇಡ ಜಂಗಮ ಸಮಾಜದ ಮುಖಂಡರಾದ ಎಂ. ಸಿದ್ದಲಿಂಗಸ್ವಾಮಿ, ರುದ್ರಸ್ವಾಮಿ, ಎಂ. ಎಸ್.ಉಮೇಶ, ಮೋಹನ್ ಕುಮಾರ್ ಸೇರಿದಂತೆ ಇತರರು ಇದ್ದರು.

## ಬೆಳ್ಳೂಡಿ : ಬೇಸಿಗೆ ಶಿಬಿರ

ದಾವಣಗೆರೆ, ಮಾ.28- ಶ್ರೀ ವಾಗ್ದೇವಿ ವಿದ್ಯಾ ಸಂಸ್ಥೆಯ ಇನ್ಸ್‌ಪೈರ್ ಟ್ಯೂಟರ್ಸ್ ವತಿಯಿಂದ ಏಪ್ರಿಲ್ 3 ರಿಂದ ಮೇ 25 ರವರೆಗೆ, 8 ರಿಂದ 10ನೇ ತರಗತಿ ಮಕ್ಕಳಿಗೆ ಬೆಳ್ಳೂಡಿಯ ಚಂದ್ರಗುಪ್ತ ಮೌರ್ಯ ಪಬ್ಲಿಕ್ ಸ್ಕೂಲ್‌ನಲ್ಲಿ ಬೇಸಿಗೆ ಶಿಬಿರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ: 9535250766, 9008526469.

## ಕಟ್ಟಡ-ರಸ್ತೆಗೆ ಏಕರೂಪದ ದರ ಪಟ್ಟಿ ಜಾರಿ

**(1ನೇ ಪುಟದಿಂದ)** ಲೋಕೋಪಯೋಗಿ ಇಲಾಖೆ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ವಿವಿಧ ಇಂಜಿನಿಯರ್ ವಿಭಾಗಗಳಲ್ಲಿ ಒಂದೊಂದು ರೀತಿಯ ದರ ಪಟ್ಟಿ ಇತ್ತು, ರಾಜ್ಯದಲ್ಲಿ 32 ದರಪಟ್ಟಿಗಳಿದ್ದವು, ಎಲ್ಲ ಎಂಜಿನಿಯರಿಂಗ್ ವಿಭಾಗದ ವ್ಯಾಪ್ತಿಯಲ್ಲಿ ಜಾರಿಯಲ್ಲಿದ್ದ ದರ ಪಟ್ಟಿಗೆ ಬದಲಾಗಿ ಏಕರೂಪ ದರಪಟ್ಟಿ ಜಾರಿಗೆ ತರಲಾಗಿದೆ, ಇದರಿಂದ ಹಣವೂ ಉಳಿತಾಯವಾಗಿದೆ ಎಂದರು.

ಟೋಲ್‌ಗಳಲ್ಲಿ ಸಮಸ್ಯೆ ಇರುವುದು ನಿಜ, ಸುಧಾರಣೆ ತರಲು ಸಾಕಷ್ಟು ಕ್ರಮ ಕೈಗೊಳ್ಳಲಾಗಿದೆ, ಟೋಲ್ ಏಜೆನ್ಸಿಗಳ ಜೊತೆ ಸಭೆ ನಡೆಸಿದರೂ ಪೂರ್ಣ ಪ್ರಯೋಜನವಾಗಿಲ್ಲ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೇಂದ್ರ ಸರ್ಕಾರದ ಟೋಲ್ ಆಗಿದ್ದರೆ ಕೇಂದ್ರಕ್ಕೆ ಪತ್ರ ಬರೆದು ಮನವಿ ಮಾಡಲಾಗು ವುದು, ರಾಜ್ಯ ಸರ್ಕಾರದ ಟೋಲ್ ಇದ್ದರೆ ರಾಜ್ಯ ಸರ್ಕಾರವೇ ಕ್ರಮ ಕೈಗೊಳ್ಳಲಿದೆ ಎಂದರು.

ರೈಲ್ವೆ ಕೆಳಸೇತುವೆ-ಮೇಲ್ಸೇತುವೆ ಮಾಡಿಕೊಡುವ ಭರವಸೆ ನೀಡಿದ ಸಚಿವರು ವಿಳಂಬವಾಗಿರುವ ಕಾಮಗಾರಿಗಳ ವೇಗ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ಅವರು ಹೇಳಿದರು.

2018-19ರಲ್ಲಿ ಆಗಿರುವ ಹೊರೆ ತಗ್ಗಿಸುವ ಉದ್ದೇಶದಿಂದ ಅಪೆಂಡಿಕ್ಸ್-ಇನಲ್ಲಿ ಅನುದಾನ ಕೊಡಲು ಸಾಧ್ಯವಾಗಿಲ್ಲ. ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಿದರೆ ಮುಖ್ಯಮಂತ್ರಿಗಳ ಜೊತೆ ಅಪೆಂಡಿಕ್ಸ್-ಇನಲ್ಲಿ ಅನುದಾನ ಒದಗಿಸಲಾಗುವುದು, ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ 600 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗುವುದು.

ಟೆಂಡರ್ ಕರೆಯುವಾಗ ನಿಗದಿತ ದರಕ್ಕಿಂತ ಕಡಿಮೆ ನಮೂದಿಸುವ ಗುತ್ತಿಗೆಗಾರರ ಕಾಮಗಾರಿ ಮೇಲೆ ಹೆಚ್ಚಿನ ನಿಗಾ ಇಡಲಾಗುವುದು, ಕಡಿಮೆ ಮೊತ್ತ ನಮೂದಿಸುವುದನ್ನು ತಡೆಯಲು ಆಗದು ಎಂದು ಸಚಿವರು ಹೇಳಿದ್ದಾರೆ.

ಅನುದಾನ ಹಂಚಿಕೆ ತಾರತಮ್ಯಕ್ಕೆ ಉತ್ತರಿಸಿದ ಸಚಿವರು, 2014ರಿಂದ 2018ರವರೆಗೆ ಕಾಂಗ್ರೆಸ್ ಶಾಸಕರಿಗೆ ಸರಾಸರಿ 156 ಕೋಟಿ, ಜೆಡಿಎಸ್ ಶಾಸಕರಿಗೆ ಸರಾಸರಿ 148 ಕೋಟಿ, ಬಿಜೆಪಿ ಶಾಸಕರಿಗೆ 122 ಕೋಟಿ ರೂ. ಅನುದಾನ ಲೋಕೋಪಯೋಗಿ ಇಲಾಖೆಯಲ್ಲಿ ದೊರೆತಿದೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಶಾಸಕರಿಗೆ 19 ಕೋಟಿ ರೂ, ಜೆಡಿಎಸ್ ಶಾಸಕರಿಗೆ 21, ಬಿಜೆಪಿ ಶಾಸಕರಿಗೆ 42 ಕೋಟಿ ರೂ. ಸರಾಸರಿ ಅನುದಾನ ದೊರೆತಿದೆ. ಎಸ್‌ಇಪಿ ಮತ್ತು ಪಿಎಸ್‌ಪಿ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಿಲ್ಲ ಎಂದು ಹೇಳಿದರು.

ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಲೋಕೋಪಯೋಗಿ ಇಲಾಖೆಯ ಅನುದಾನ ಬೇಡಿಕೆಯನ್ನು ಮತಕ್ಕೆ ಹಾಕಿದಾಗ ಧ್ವನಿ ಮತದ ಒಪ್ಪಿಗೆ ದೊರೆಯಿತು.

## ಸಿಇಟಿ ಪರೀಕ್ಷೆ

**(1ನೇ ಪುಟದಿಂದ)** ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಇತರೆ ರಾಜ್ಯಗಳಲ್ಲಿ ಸಿಇಟಿಯಂತಹ ಪರೀಕ್ಷೆಗೆ ಗೊತ್ತುಪಡಿಸಿಕೊಂಡಿರುವ ಸಂಭವನೀಯ ದಿನಾಂಕಗಳ ಬಗ್ಗೆ ಮಾಹಿತಿ ಪಡೆದ ನಂತರ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದರು. ಜೂನ್ 16ರಂದು ಬೆಳಗ್ಗೆ ಜೀವಶಾಸ್ತ್ರ, ಮಧ್ಯಾಹ್ನ ಗಣಿತ, 17ರಂದು ಬೆಳಗ್ಗೆ ಭೌತಶಾಸ್ತ್ರ ಮತ್ತು ಮಧ್ಯಾಹ್ನ ರಸಾಯನಶಾಸ್ತ್ರ ಹಾಗೂ 18ರಂದು ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಸಿಇಟಿ ನಡೆಸಲು ಉದ್ದೇಶಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಏಪ್ರಿಲ್ 5ರಿಂದ 20ರವರೆಗೆ ಸಿಇಟಿಯಲ್ಲಿ ಹೆಸರು ನೋಂದಾಯಿಸಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಆನ್‌ಲೈನ್ ಮೂಲಕವೇ ನಿಗದಿತ ಶುಲ್ಕ ಸಲ್ಲಿಸಲು ಏಪ್ರಿಲ್ 22ರವರೆಗೆ ಸಮಯಾವಕಾಶವಿದೆ.

ಶುಲ್ಕ ಪಾವತಿ ನಂತರ, ಅರ್ಜಿಯಲ್ಲಿನ ಮಾಹಿತಿ ಪರಿಷ್ಕರಿಸುವುದಾದರೆ, ಅದಕ್ಕೆ ಮೇ 2ರಿಂದ 6ವರೆಗೆ ಕಾಲಾವಕಾಶ ಇರಲಿದೆ, ನಂತರ ವಿದ್ಯಾರ್ಥಿಗಳು ಮೇ 30ರಿಂದ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಎಂದು ಸಚಿವರು ವಿವರಿಸಿದರು.

## ಮಲೇಬೆನ್ನೂರು ಪುರಸಭೆ : 38,77,313 ಉಳಿತಾಯ ಬಜೆಟ್



ಮಲೇಬೆನ್ನೂರು,ಮಾ.28- ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 2022-23ನೇ ಸಾಲಿನ ಆಯವ್ಯಯ ಮಂಡನೆ ಸಭೆಯಲ್ಲಿ ಪುರಸಭೆ ಆಡಳಿತಾಧಿಕಾರಿಗಳೂ ಆಗಿರುವ ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್ ಅವರು ನಿರೀಕ್ಷಿತ ಮತ್ತು ವೆಚ್ಚಗಳ ಯೋಜನೆ ರೂಪಿಸಿ 38,77, 313 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.

**ಆದಾಯ ನಿರೀಕ್ಷೆ :** 2022-23ನೇ ಸಾಲಿಗೆ ಪುರಸಭೆಗೆ ಮನೆ ಕಂದಾಯ 50 ಲಕ್ಷ ರೂ. ನೀರಿನ ತೆರಿಗೆ 10 ಲಕ್ಷ ರೂ,ಟ್ರೇಡ್ ಲೈಸೆನ್ಸ್ ಫೀ 5 ಲಕ್ಷ ರೂ, ಜಾಹೀರಾತು ಶುಲ್ಕ 2 ಲಕ್ಷ ರೂ, ಪುರಸಭೆ ಮಳಿಗೆ ಹರಾಜಿನಿಂದ 9 ಲಕ್ಷ ರೂ, ಕಟ್ಟಡ ಪರವಾನಿಗೆ ಶುಲ್ಕ 10.50 ಲಕ್ಷ ರೂ, ಸಂತೆ ಹರಾಜು ಮೊತ್ತ 9 ಲಕ್ಷ ರೂ, ನೆಲಬಾಡಿಗೆ 5 ಲಕ್ಷ ರೂ, ಇತರೆ ಆದಾಯ 25 ಲಕ್ಷ ರೂ ಮತ್ತು ಅಸಾಮಾನ್ಯ ಆದಾಯ 2.15 ಕೋಟಿ ರೂ ಸೇರಿ ಒಟ್ಟು 3 ಕೋಟಿ 40 ಲಕ್ಷದ 50 ಸಾವಿರ ರೂ ಆದಾಯವನ್ನು ನಿರೀಕ್ಷೆ ಮಾಡಲಾಗಿದೆ ಎಂದು ಮಮತಾ ಹೊಸಗೌಡರ್ ಸಭೆಗೆ ತಿಳಿಸಿದರು.

ಸರ್ಕಾರದಿಂದ ಎಸ್‌ಎಫ್‌ಸಿ ಮುಕ್ತ ನಿಧಿ 60 ಲಕ್ಷ ರೂ, ಸಿಆರ್‌ಎಫ್‌ನಿಂದ 10 ಲಕ್ಷ ರೂ, ಸಂಸದರ ಮತ್ತು ಶಾಸಕರ ನಿಧಿಯಿಂದ 50 ಲಕ್ಷ ರೂ, ಸಿಆರ್‌ಎಫ್‌ನಿಂದ 25 ಲಕ್ಷ ರೂ, ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ 25 ಲಕ್ಷ ರೂ, ಡೇ-ನಲ್ಮ ಯೋಜನೆಯಿಂದ 5 ಲಕ್ಷ ರೂ ಸೇರಿ ಒಟ್ಟು 6 ಕೋಟಿ 35 ಲಕ್ಷ ರೂಗಳ ಅನುದಾನ ನಿರೀಕ್ಷಿಸಲಾಗಿರುತ್ತದೆ. ಒಟ್ಟಾರೆಯಾಗಿ ಪುರಸಭೆಗೆ ಸ್ವಂತ ಆದಾಯ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬರುವ ನಿರೀಕ್ಷಿತ ಅನುದಾನ ಸೇರಿ ಒಟ್ಟು9 ಕೋಟಿ 75 ಲಕ್ಷದ 50 ಸಾವಿರ ರೂ. ಆಗಿರುತ್ತದೆ.


ಈ ಎಲ್ಲಾ ಆದಾಯದ ಮೇಲೆ ಈ ಸಾಲಿನ ಬಜೆಟ್ ತಯಾರಿಸಿದ್ದು, ಸರ್ಕಾರದ ವಿವಿಧ ಅನುದಾನಗಳಿಂದ ಬರುವ ಅನುದಾನಕ್ಕೆ ಅನುಗುಣವಾಗಿ ಪಟ್ಟಣದ ಜನತೆಗೆ ಅತ್ಯಾವಶ್ಯಕವಾಗಿರುವ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪ ಮತ್ತು ಸ್ವಚ್ಛತೆ ನಿರ್ವಹಣೆಗೆ ಮೊದಲ ಆದ್ಯತೆಯಾಗಿ ಈ ವರ್ಷದ ಬಜೆಟ್‌ನಲ್ಲಿ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಮಮತಾ ವಿವರಿಸಿದರು.

ಪುರಸಭೆ ಸದಸ್ಯ ಕೆ. ಜಿ. ಲೋಕೇಶ್ ಮಾತನಾಡಿ, ಲಂಚ ಕೊಟ್ಟರೆ ಮಾತ್ರ ಇ-ಸ್ವತ್ತು ದಾಖಲೆಗಳನ್ನು ಬೇಗ ಕೊಡುತ್ತಾರೆ, ಇಲ್ಲದಿದ್ದರೆ ತಿಂಗಳುಗಟ್ಟಲೆ ಸತಾಯಿಸುತ್ತಾರೆಂದು ದೂರಿದರು.

ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ ಸ್ವಾಗತಿಸಿದರು. ಪುರಸಭೆ ಸದಸ್ಯರಾದ ಸಿ ಅಬ್ದಲ್ ಮಜೀದ್, ಗೌಡ್ರ ಮಂಜಣ್ಣ, ಬಿ ಮಂಜುನಾಥ್, ನಯಾಜ್, ಸಾಬೀರ್‌ಅಲಿ, ಬೆಣ್ಣೆಹಳ್ಳಿ ಸಿದ್ದೇಶ್, ಶಬ್ಬೀರ್‌ಖಾನ್, ದಾದಾಪೀರ್, ಖಲೀಲ್, ಶ್ರೀಮತಿ ಸುಲೋಚನಮ್ಮ ಕುಮಾರ್, ಶ್ರೀಮತಿ ಮೀನಾಕ್ಷಮ್ಮ ಹಾಲೇಶಪ್ಪ, ಶ್ರೀಮತಿ ಸುಧಾರಾಜು, ನಾಮಿನಿ ಸದಸ್ಯರಾದ ಪಿ. ಆರ್. ರಾಜು, ಟಿ ವಾಸಣ್ಣ, ಎ. ಕೆ. ಲೋಕೇಶ್ ಮತ್ತು ಬಿ ಸುರೇಶ್, ಕೆ. ಪಿ. ಗಂಗಾಧರ್, ಭೋವಿಕುಮಾರ್, ಎಂ. ಬಿ ರುಸ್ತುಂ, ಚಮನ್‌ಷಾ, ಓ. ಜಿ. ಕುಮಾರ್, ಅಧಿಕಾರಿಗಳಾದ ದಿನಕರ್, ಗಣೇಶ್, ಉಮೇಶ್, ಹಾಲೇಶಪ್ಪ ಸಭೆಯಲ್ಲಿದ್ದರು.

॥ ಶ್ರೀ ಮರಳಸಿದ್ದೇಶ್ವರ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ॥ ಜಿ॥ ಆಲೂರು ಗ್ರಾಮದ ವಾಸಿ
**ಶ್ರೀ ಹಲಗೇರಿ ನಾಗರಾಜಪ್ಪ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 18.03.2022ನೇಯ ಶುಕ್ರವಾರ 3.25ಕ್ಕೆ ನಮ್ಮ ತಾಯಿಯವರಾದ
**ಶ್ರೀ ಹಲಗೇರಿ ಬಸಪ್ಪ**
ಇವರ ಧರ್ಮಪತ್ನಿ
**ಶರಣೆ ಶ್ರೀಮತಿ ಹಲಗೇರಿ ನಾಗಮ್ಮ (ಆಲೂರು ಚೌಡಜ್ಜಿ)**
ಇವರು ಲಿಂಗೈಕ್ಯರಾದ ಪ್ರಯುಕ್ತ ಅವರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ" ಯನ್ನು**
**ದಿನಾಂಕ : 30.03.2022ನೇ ಬುಧವಾರ ಬೆಳಿಗ್ಗೆ 10.30 ರಿಂದ ಮೃತರ ಸ್ವಗೃಹ ಆಲೂರು ಗ್ರಾಮದಲ್ಲಿ** ನೆರವೇರಿಸಲು ತೀರ್ಮಾನಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :


**ಶ್ರೀಮತಿ ಹನುಮಕ್ಕ ಮತ್ತು ಮಕ್ಕಳು, ಆಲೂರು., ಶ್ರೀಮತಿ ಗೌರಮ್ಮ ಮತ್ತು ಮಕ್ಕಳು, ಆಲೂರು. ಹಲಗೇರಿ ವಂಶಸ್ಥರು, ಆಲೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಫೋ. : 97417 05081, 91649 11419**

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ

## ಕುಂದೂರಿನಲ್ಲಿ ಓಕುಳಿ

ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ ಇಂದು ಬೆಳಿಗ್ಗೆ 10.30ಕ್ಕೆ ಓಕುಳಿ, ರಾತ್ರಿ 8ಕ್ಕೆ ಅಡ್ಡಪಲ್ಲಕ್ಕಿ ಉತ್ಸವ ನಡೆಯಲಿದೆ. ಇಂದು

### ಶ್ರೀಮತಿ ಮೀನಾಕ್ಷಿ ಜಿ. ಕಂಟ್ರಾಕ್ಟರ್ ಲಿಂಗೈಕ್ಯ



ದಾವಣಗೆರೆ ಜೆ.ಹೆಚ್. ಪಟೇಲ್ ಬಡಾವಣೆ ವಾಸಿ ಟಿ.ಎಂ. ಶಿವಲಿಂಗಯ್ಯ ನವರ ಧರ್ಮಪತ್ನಿ, ಸಿ.ಜಿ. ಆಸ್ಪತ್ರೆಯ ನಿವೃತ್ತ ಸ್ಟಾಫ್ ನರ್ಸ್ ಆಗಿದ್ದ ಶ್ರೀಮತಿ ಮೀನಾಕ್ಷಿ ಜಿ. ಕಂಟ್ರಾಕ್ಟರ್ (66) ಅವರು ದಿನಾಂಕ 28.03.2022ರ ಸೋಮವಾರ ಮಧ್ಯಾಹ್ನ 2.30ಕ್ಕೆ ಲಿಂಗೈಕ್ಯರಾಗಿದ್ದಾರೆ. ಪತಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.03.2022ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನಗರದ ಗ್ಲಾಸ್ ಹೌಸ್ ಹತ್ತಿರ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

# ಎಸ್ಸೆಸ್ಸೆಲ್ಸಿ ಪರೀಕ್ಷೆ : ಬಿಇಓ, ಅಕ್ಷರ ದಾಸೋಹ ಅಧಿಕಾರಿ ಪರಿಶೀಲನೆ



## ಹೊನ್ನಾಳಿ : ಕನ್ನಡ ಐಚ್ಚಿಕ ಭಾಷೆಗೆ 40 ವಿದ್ಯಾರ್ಥಿಗಳು ಗೈರು

ಹೊನ್ನಾಳಿ,ಮಾ.28- ಕೊರೊನಾ ಸೋಂಕಿನಿಂದ ಮುಕ್ತರಾದ ನಂತರ ಇದೇ ಮೊದಲ ಬಾರಿಗೆ ಅವಳಿ ತಾಲ್ಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ವಿದ್ಯಾರ್ಥಿಗಳು ನಿರ್ಭಯವಾಗಿ ಬರೆದರು. ಪರೀಕ್ಷಾ ಕೇಂದ್ರಕ್ಕೆ ಆಗಮಿಸುವ ವಿದ್ಯಾರ್ಥಿಗಳಿಗೆ ಉಷ್ಣತೆ ಹಾಗೂ ಆಮ್ಲಜನಕವನ್ನು ಶುಶ್ರೂಷಕರು ಹಾಗೂ ಆಶಾ ಕಾರ್ಯಕರ್ತರು ಪರೀಕ್ಷೆ ಮಾಡಿ ಕೇಂದ್ರಕ್ಕೆ ಕಳುಹಿಸುತ್ತಿದ್ದುದು ಕಂಡು ಬಂತು.

3118 ವಿದ್ಯಾರ್ಥಿಗಳ ಪೈಕಿ 3070 ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಿದ್ದರು, ಬಾಕಿ 40 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿದ್ದರು. ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳಿಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿತ್ತು.

ಈ ಬಾರಿ 4 ಹೊಸ ಕೇಂದ್ರಗಳನ್ನು ತೆರಯಲಾಗಿತ್ತು, ಹೊನ್ನಾಳಿ ತಾಲ್ಲೂಕಿನ ಲಿಂಗಾಪುರ, ಹೊನ್ನಾಳಿ ನಗರ, ಗೊಲ್ಲರಹಳ್ಳಿ ಹಾಗೂ ಅರಬಗಟ್ಟೆಯಲ್ಲಿ 4 ಹೊಸ ಕೇಂದ್ರಗಳನ್ನು ತೆರಯಲಾಗಿತ್ತು. ಇದುವರೆಗೂ 10 ಕೇಂದ್ರಗಳು ಇತ್ತು, ಇದೀಗ ಒಟ್ಟು 14 ಕೇಂದ್ರಗಳಲ್ಲಿ 3070 ವಿದ್ಯಾರ್ಥಿಗಳು ಮಾತ್ರ ಪರೀಕ್ಷೆ ಬರೆದಿದ್ದಾರೆ, ಆದರೆ ವಿದ್ಯಾರ್ಥಿಗಳ ಗೈರುಹಾಜರಿಗೆ ಕಾರಣ ತಿಳಿದು ಬಂದಿಲ್ಲ.

ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿಯರು ಶಾಲಾ ಹೊರ ಕೊಠಡಿಯಲ್ಲಿ ಹಿಜಾಬ್ ತೆಗೆದು ಸಮವಸ್ತ್ರದಲ್ಲಿ ಕೇಂದ್ರಕ್ಕೆ ಆಗಮಿಸಿ ಪರೀಕ್ಷೆ ಬರೆದಿದ್ದಾರೆ. ಆದರೆ, ಯಾವುದೇ ಅವಘಡ ಸಂಭವಿಸಿಲ್ಲ ಎಂದು ಬಿಇಒ ರಾಜೀವ್ ತಿಳಿಸಿದ್ದಾರೆ.

# ಎಸ್.ಎಂ.ಎಲಿ ಅವರಿಗೆ 'ಸಂಕಲ್ಪ ವೈದ್ಯ ಶ್ರೀ' ಪ್ರಶಸ್ತಿ



ದಾವಣಗೆರೆ, ಮಾ.28- ನೊಂದವರ ಬಾಳಲ್ಲಿ ಭರವಸೆಯ ಬೆಳಕು ಎಂಬ ಸಂಕಲ್ಪದೊಂದಿಗೆ ನಗರದಲ್ಲಿ ಸ್ಥಾಪನೆಗೊಂಡಿರುವ ಸಂಕಲ್ಪ ಸೇವಾ ಫೌಂಡೇಶನ್ ವತಿಯಿಂದ ಬಡವರ ವೈದ್ಯ ಎಂದೇ ಹೆಸರಾಗಿರುವ ಹಿರಿಯ ವೈದ್ಯ ಡಾ. ಎಸ್. ಎಂ. ಎಲಿ ಅವರೆಗೆ ಸಂಕಲ್ಪ ಸೇವಾ ಫೌಂಡೇಶನ್ ಸಂಸ್ಥೆಯ 'ಸಂಕಲ್ಪ ವೈದ್ಯ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಂಕಲ್ಪ ಸೇವಾ ಫೌಂಡೇಶನ್ ಅಧ್ಯಕ್ಷ ಜಿ. ಮಹಾಂತೇಶ್, ಕಾರ್ಯದರ್ಶಿ ಅನಿಲ್ ರಾಯ್ಕರ್, ಅಭಿ ಕಾಟನ್ ಬಕ್ಕೇಶ್, ನಿವೃತ್ತ ಕೃಷಿ ಅಧಿಕಾರಿ ಹೆಚ್.ಸಿ ಹುಲ್ಲತಿ, ಬಾದಾಮಿ ಜಯಣ್ಣ, ಬಸವರಾಜ್ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿ ದ್ದರು. ಸಂಕಲ್ಪ ಸೇವಾ ಫೌಂಡೇಶನ್ ಸಂಸ್ಥೆಯ ಜನಪರ ಕಾಳಜಿ ಹಾಗೂ ನಿಸ್ವಾರ್ಥ ಸೇವೆಯನ್ನು ನೇತ್ರದಾನ, ದೇಹದಾನ, ನಿರಂತರ ಅನ್ನದಾನ ಹಾಗೂ ಸಂಕಲ್ಪ ಆನಂದ ಧಾಮದ ಕೆಲಸಗಳ ಬಗ್ಗೆ ಪರಾಮರ್ಶಿಸಿದ ಎಲಿ ಅವರು, ಸಂಕಲ್ಪ ಸೇವಾ ಫೌಂಡೇಶನ್ ಪದಾಧಿಕಾರಿಗಳನ್ನು ಅಭಿನಂದಿಸಿದರು.

# ಮಾಜಿ ಪ್ರಧಾನಿ ದೇವೇಗೌಡ, ಪತ್ನಿಗೆ ಐ.ಟಿ. ನೋಟಿಸ್

ಬೆಂಗಳೂರು, ಮಾ. 28 – ಮಾಜಿ ಪ್ರಧಾನಿ ಹೆಚ್. ಡಿ. ದೇವೇಗೌಡ ಹಾಗೂ ಪತ್ನಿ ಚೆನ್ನಮ್ಮ ಆಸ್ತಿಗಳಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆ ನೋಟಿಸ್ ಕಳಿಸಿದೆ ಎಂದು ಪುತ್ರ ಹೆಚ್.ಡಿ. ರೇವಣ್ಣ ತಿಳಿಸಿದ್ದಾರೆ.



ಪತ್ರಕರ್ತರೊಂದಿಗೆ ಮಾತನಾಡುತ್ತಾ ಈ ವಿಷಯ ತಿಳಿಸಿರುವ ರೇವಣ್ಣ, ಅವರು ನೋಟಿಸ್ ಕಳಿಸಲಿ. ನಾವು ನಮ್ಮ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದೇವೆ. ಅವರು ಬಂದು ನೋಡಲಿ ಎಂದಿದ್ದಾರೆ. ಅವರು ಮಾಜಿ ಪ್ರಧಾನಿಯ ಪತ್ನಿಗೆ ನೋಟಿಸ್ ಕಳಿಸಿದ್ದಾರೆ.

ಅವರು ನೋಟಿಸ್ ಕಳಿಸಬಾರದು ಎಂದು ನಾನೇನೂ ಹೇಳುವುದಿಲ್ಲ. ಆದಾಯ ತೆರಿಗೆ ಇಲಾಖೆ ಅಧಿಕಾರಿಗಳೇ ಬಂದು ಪ್ರತಿ ಎಕರೆಯಲ್ಲಿ ಬೆಳೆದಿರುವ ಜಮೀನು ನೋಡಲಿ ಎಂದು ರೇವಣ್ಣ ತಿಳಿಸಿದ್ದಾರೆ.

# ಎಐವೈಎಫ್‌ನಿಂದ ಹುತಾತ್ಮ ದಿನಾಚರಣೆ

ದಾವಣಗೆರೆ, ಮಾ. 28- ಅಖಿಲ ಭಾರತ ಯುವಜನ ಒಕ್ಕೂಟ (ಎಐವೈಎಫ್)ದ ವತಿಯಿಂದ ಆವರಗೆರೆಯ ಭಗತ್‌ಸಿಂಗ್ ಪ್ರತಿಮೆ ಬಳಿ ಕ್ರಾಂತಿಕಾರಿ ಭಗತ್ ಸಿಂಗ್ ಅವರ ಹುತಾತ್ಮ ದಿನಾಚರಣೆಯನ್ನು ನಡೆಸಲಾಯಿತು.ಎಐವೈಎಫ್ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಅವರು, ಭಗತ್ ಸಿಂಗ್ ಜೀವನ ಚರಿತ್ರೆಯನ್ನು ತಿಳಿಸಿಕೊಟ್ಟರು. ಸಂಘಟನೆ ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಕಾರ್ಯದರ್ಶಿ ಬಿ.ಡಿ. ಮಂಜುನಾಥ, ಕೆ. ಶೇಖರ್, ಎಸ್. ಗೋವಿಂದ, ಆರ್. ಸಂತೋಷ್, ಕರಿಯಪ್ಪ, ಕುಮಾರ, ನಿಂಗಣ್ಣ, ನಾಗರಾಜ, ಕೆ. ಮಲ್ಲಿಕಾರ್ಜುನ, ಹನುಮಂತಪ್ಪ ಹಳ್ಳಳ್ಳಿ, ಅಂಜಿನಪ್ಪ, ಯು. ಮಂಜುನಾಥ ಮತ್ತಿತರರು ಭಾಗವಹಿಸಿದ್ದರು. ಆವರಗೆರೆ ಕೆ. ಬಾನಪ್ಪ ಸ್ವಾಗತಿಸಿದರು. ಎ. ತಿಪ್ಪೇಶಿ ವಂದಿಸಿದರು.

# ಪಂಚಾಯ್ತಿ ಚುನಾವಣೆ ಮೀಸಲಾತಿಗೆ ನಾಡಿದ್ದು ಸಭೆ

ಬೆಂಗಳೂರು, ಮಾ. 28 - ಜಿಲ್ಲಾ ಹಾಗೂ ತಾಲ್ಲೂಕು ಪಂಚಾ ಯತ್ ಚುನಾವಣೆಗಳಲ್ಲಿ ಹಿಂದು ಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಸಾಧಕ-ಬಾಧ ಕಗಳ ಬಗ್ಗೆ ಚರ್ಚಿಸಲು ಈ ತಿಂಗಳ 31ರಂದು ಸರ್ವ ಪಕ್ಷ ಸಭೆ ಕರೆಯುವುದಾಗಿ ಗ್ರಾಮೀಣಾಭಿವೃದ್ದಿ ಸಚಿವ ಕೆ.ಎಸ್.ಈಶ್ವರಪ್ಪ ವಿಧಾನಸಭೆಗೆ ತಿಳಿಸಿದರು. ಯಾವುದೇ ಕಾರಣಕ್ಕೂ ಜಿಲ್ಲಾ ಹಾಗೂ ತಾಲ್ಲೂಕು ಪಂಚಾ ಯತ್ ಚುನಾವಣೆ ವೇಳೆ ಹಿಂದುಳಿ ದ ವರ್ಗಗಳಿಗೆ ಅನ್ಯಾಯವಾಗಲು ಬಿಡುವುದಿಲ್ಲ, ಈ ಎಲ್ಲ ಅಂಶಗಳ ಬಗ್ಗೆ ಎದ್ದಿರುವ ಗೊಂದಲಗಳ ಬಗ್ಗೆ ಚರ್ಚಿಸಲು ಸರ್ವಪಕ್ಷ ಸಭೆ ಕರೆದಿರುವುದಾಗಿ ತಿಳಿಸಿದರು.

ಅಂದಿನ ಸಭೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಜೆ.ಸಿ. ಮಾಧುಸ್ವಾಮಿ, ಅಡ್ವೊಕೇಟ್ ಜನರಲ್, ಕಾನೂನು ತಜ್ಞರು, ಪ್ರತಿಪಕ್ಷಗಳ ನಾಯಕರು ಸೇರಿದಂತೆ ಸಮಬಂಧಪಟ್ಟ ಎಲ್ಲರೂ ಭಾಗವಹಿಸಿ ಅಭಿಪ್ರಾಯಗಳನ್ನು ತಿಳಿಸಿದ ನಂತರ ಅಂತಿಮವಾಗಿ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ ಎಂದರು.

ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಸೇರಿದಂತೆ ಯಾವುದೇ ಪಕ್ಷ ಅಧಿಕಾರದಲ್ಲಿ ಇರಲಿ, ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡಿ ಚುನಾವಣೆಗೆ ಹೋಗುವುದಿಲ್ಲ, ಈ ಸಮುದಾಯಕ್ಕೆ ಎಷ್ಟು ಪ್ರಮಾಣದಲ್ಲಿ ಮೀಸಲಾತಿ ನೀಡಬೇಕು ಎಂಬ ವಿಚಾರ ಸುಪ್ರೀಂ ಕೋರ್ಟ್ ಮುಂದಿದೆ, ಸರ್ವಪಕ್ಷಗಳ ಸಭೆಯಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳೋಣ, ಇದಕ್ಕೆ ಎಲ್ಲರೂ ಸಹಕರಿಸಬೇಕೆಂದು ಈಶ್ವರಪ್ಪ ಮನವಿ ಮಾಡಿದರು.

## ಗುಡಾಳ್‌ನಲ್ಲಿ ಇಂದು ಶ್ರೀ ಆಂಜನೇಯ ತೇರು

ದಾವಣಗೆರೆ ತಾಲ್ಲೂಕಿನ ಗುಡಾಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 8 ಗಂಟೆಗೆ ಓಕಳಿ ನಡೆಯುವುದು.

# ರಾಜನಹಳ್ಳಿ ಶ್ರೀಗಳ ಧರಣಿ 30ಕ್ಕೆ ರಾಜ್ಯ ಮಟ್ಟದ ವಿಶೇಷ ಸಭೆ



ಬೆಂಗಳೂರು, ಮಾ.28- ನಿವೃತ್ತ ನ್ಯಾಯಾಧೀಶ ನಾಗಮೋಹನ್ ದಾಸ್ ವರದಿ (ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ) ಅನುಷ್ಠಾನಕ್ಕೆ ಒತ್ತಾಯಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರು ಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋ ರಾತ್ರಿ ಧರಣಿ ಸತ್ಯಾಗ್ರಹವು ಸೋಮ ವಾರ 47ನೇ ದಿನಕ್ಕೆ ಕಾಲಿಟ್ಟಿತು.

ಆರ್ಯ ಈಡಿಗ ಸಮಾಜದ ಪೀಠಾಧಿಪತಿ ಶ್ರೀ ರೇಣುಕಾನಂದ ಸ್ವಾಮೀಜಿ, ಸಿರಶಿಯ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಶಿವಮೊಗ್ಗ ಬಸವಕೇಂದ್ರದ ಶ್ರೀ ಮರುಳಸಿದ್ದ ಸ್ವಾಮೀಜಿ, ಶಿಕಾರಿಪುರದ ಶ್ರೀ ಚನ್ನಬಸವ ಸ್ವಾಮೀಜಿ ಅವರು ಶ್ರೀಗಳನ್ನು ಭೇಟಿ ಮಾಡಿ, ನ್ಯಾಯಬದ್ಧ ಹೋರಾಟಕ್ಕೆ ಬೆಂಬಲ ನೀಡಿದರು.

ದಲಿತ ಸಂಘಟನೆಗಳ ಮುಖಂಡರು ಕೂಡಾ ಈ ದಿನ ಧರಣಿಯಲ್ಲಿ ಭಾಗವಹಿಸಿ, ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕನಾಥ್ ಮಾತನಾಡಿ, ಶ್ರೀಗಳ ಹೋರಾಟಕ್ಕೆ ಜಯ ಸಿಗಲಿದೆ ಎಂದರು.

**ರಾಜ್ಯಮಟ್ಟದ ಸಭೆ :** ಶ್ರೀಗಳ ಧರಣಿ ಸತ್ಯಾಗ್ರಹ 47ನೇ ದಿನಕ್ಕೆ ಕಾಲಿಟ್ಟಿದ್ದರೂ ರಾಜ್ಯ ಸರ್ಕಾರ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವ ಹಿನ್ನೆಲೆಯಲ್ಲಿ ಇದೇ ದಿನಾಂಕ 30ರ ಬುಧವಾರ ಸಂಜೆ 5 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯಮಟ್ಟದ ಎಸ್ಸಿ-ಎಸ್ಟಿ ಜನಾಂಗಗಳ ಮುಖಂಡರ ಹಾಗೂ ಹೋರಾಟಗಾರರ, ವಿವಿಧ ಸಂಘಟನೆಗಳ ಮುಖ್ಯಸ್ಥರ ವಿಶೇಷ ಸಭೆಯನ್ನು ಕರೆಯಲಾಗಿದೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ತಿಳಿಸಿದ್ದಾರೆ.

# ಈಶ್ವರಮ್ಮ ಪ್ರೌಢಶಾಲೆಯಲ್ಲಿ ಪ್ರತಿಭಾ ಪುರಸ್ಕಾರ



ದಾವಣಗೆರೆ,ಮಾ.28- ಕಳೆದ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ನಗರದ ಈಶ್ವರಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು .

ಅತೀ ಹೆಚ್ಚು ಅಂಕಗಳನ್ನು ಪಡೆದ ಕು.ಸುಶಾಂತ ಡಿ. ಕಾಳೆ (ಶೇ.98.4) ಮತ್ತು ಮಾನಸ ಆರ್.ಪಟೇಲ್ (ಶೇ.98.08) ಇವರಿಗೆ ಸ್ವರ್ಣ ಪದಕಗಳನ್ನು ಮತ್ತು ಶೇ.90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ 17 ವಿದ್ಯಾರ್ಥಿಗಳಿಗೆ ರಜತ ಪದಕಗಳನ್ನು ಪ್ರದಾನ ಮಾಡಲಾಯಿತು.

ಗುಣಮಟ್ಟದ ಶಿಕ್ಷಣವನ್ನು ನೀಡುವ ಶಾಲೆಯಾಗಿ ಈಶ್ವರಮ್ಮ ಶಾಲೆ ಹೊರಹೊಮ್ಮಿದೆ. ಇದಕ್ಕೆ ನಿಸ್ವಾರ್ಥವಾಗಿ ಸೇವೆಗೈಯ್ಯುತ್ತಿರುವ ಶಾಲಾಡಳಿತ ಮಂಡಳಿ ಮುಖ್ಯ ಕಾರಣವಾಗಿದೆ. ಈಶ್ವರಮ್ಮ ಶಾಲೆಯಲ್ಲಿ ವ್ಯಾಸಂಗ ಮಾಡಿ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದ ಮೂವರು ಹಿರಿಯ ವಿದ್ಯಾರ್ಥಿಗಳನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಿ, ಅವರ ಮೂಲಕ ಎಲ್ಲ ವಿದ್ಯಾರ್ಥಿಗಳಲ್ಲಿ ಪ್ರೇರಣೆ ಕೊಡುವುದು ಈ ವರ್ಷದ ಪ್ರತಿಭಾ ಪುರಸ್ಕಾರದ ವಿಶೇಷವಾಗಿದೆ ಎಂದು ಶಾಲಾ ಪ್ರಾಂಶುಪಾಲರಾದ ಕೆ.ಎಸ್.ಪ್ರಭುಕುಮಾರ್ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ ತಿಳಿಸಿದರು.

ಶಾಲೆಯ ಹಳೆಯ ವಿದ್ಯಾರ್ಥಿಗಳಾಗಿರುವ ಬೆಂಗಳೂರಿನ ಮೆಟ್ರೋದ ಶ್ರೀಮತಿ ಪದ್ಮಶ್ರೀ ಎಸ್.ಎಂ, ಬೆಂಗಳೂರಿನ ರೋವ್ ಲ್ಯಾಬ್ಸ್ ಪ್ರೈ ಲಿ. ಕಂಪನಿಯ ಸಿ.ಇ.ಒ ಶ್ರೇಯಸ್ ವೆರ್ಣೇಕರ್ ಮತ್ತು ನಗರದ ಜೆ. ಜೆ.ಎಂ.ಮೆಡಿಕಲ್ ಕಾಲೇಜ್‌ನ ಹೌಸ್ ಸರ್ಜನ್ ಡಾ. ಅಕ್ಷತಾ ಎಸ್. ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಶಾಲಾ ಕಾರ್ಯದರ್ಶಿ ಶ್ರೀಮತಿ ಎ.ಆರ್.ಉಷಾ ರಂಗನಾಥ್ ಮಾತನಾಡಿದರು. ಅಧ್ಯಕ್ಷರಾದ ಶ್ರೀಮತಿ ಕೆ.ಆರ್.ಸುಜಾತ ಕೃಷ್ಣ, ತಮ್ಮ ಅಧ್ಯಕ್ಷತೆ ವಹಿಸಿದ್ದರು. ಖಜಾಂಚಿ ಶ್ರೀಮತಿ ಎ.ಪಿ.ಸುಜಾತ ಸ್ವಾಗತಿಸಿದರು. ಉಪಪ್ರಾಂಶುಪಾಲರಾದ ಶ್ರೀಮತಿ ಶಶಿರೇಖಾ ಜಿ.ಎಸ್. ವಂದಿಸಿದರು. ಸಹ ಶಿಕ್ಷಕಿ ಶ್ವೇತಾ ಕೆ.ವಿ. ನಿರೂಪಿಸಿದರು.

# ನ್ಯಾಯಾಂಗದ ಅಧಿಕಾರಿಗಳು ಕಾರ್ಯಾಂಗಕ್ಕೆ ಬರಲು ಅನುಮತಿ : ಸಂಸದೀಯ ಸಮಿತಿ ಶಿಫಾರಸ್ಸು

ನವದೆಹಲಿ, ಮಾ. 28 - ಕೇಂದ್ರ ಸಿಬ್ಬಂದಿ ಇಲಾಖೆಯು ತನ್ನ ಕಲ್ಪನೆಗಳನ್ನು ಕೈ ಬಿಟ್ಟು, ಶಾಸಕಾಂಗ ಹಾಗೂ ನ್ಯಾಯಾಂಗದ ಅಧಿಕಾರಿಗಳು ಕಾರ್ಯಾಂಗದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ನೀಡಬೇಕು ಎಂದು ಸಂಸದೀಯ ಸಮಿತಿಯೊಂದು ತಿಳಿಸಿದೆ.

ಇತ್ತೀಚೆಗೆ ಸಂಸತ್ತಿನಲ್ಲಿ ವರದಿಯನ್ನು ಮಂಡಿಸಲಾಗಿದ್ದು, ಈಗಿರುವ ಹಾಗೂ ಮುಂದಿನ ಸವಾಲುಗಳಿಗೆ ಅನುಗುಣವಾಗಿ ಸರ್ಕಾರ ಸಿಬ್ಬಂದಿಯ ಮರು ಹೊಂದಾಣಿಕೆ ಮಾಡಬೇಕು ಎಂದು ತಿಳಿಸಲಾಗಿದೆ. ಭಾರತದಲ್ಲಿ ಪ್ರತಿ ಲಕ್ಷಕ್ಕೆ 139 ಸರ್ಕಾರಿ ಉದ್ಯೋಗಿಗಳಿದ್ದಾರೆ. ಅಮೆರಿಕದಲ್ಲಿ ಪ್ರತಿ ಲಕ್ಷಕ್ಕೆ 668 ಉದ್ಯೋಗಿಗಳಿದ್ದಾರೆ. ಉದ್ಯೋಗಿಗಳ ನೇಮಕದಲ್ಲಿ ವ್ಯತ್ಯಾಸವಿರುವ ಬಗ್ಗೆಯೂ ಕಾನೂನು ಮತ್ತು ನ್ಯಾಯ ಸಮಿತಿ ಗಮನ ಸೆಳೆದಿದೆ.

# ಒಟಿಎಸ್ ಯೋಜನೆಗೆ ಒತ್ತಾಯಿಸಿ, ರೈತರ ಅಹೋರಾತ್ರಿ ಧರಣಿ


ರಾಣೇಬೆನ್ನೂರು

ರಾಣೇಬೆನ್ನೂರು, ಮಾ.28- ಒಟಿಎಸ್ ಯೋಜನೆ ಯಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದವರು ರೈತರಿಗೆ ಮಾಡಿದ ವಂಚನೆಯನ್ನು ಖಂಡಿಸಿ, ಮಾಕನೂರು ಶಾಖೆಯ ಮುಂದೆ ವಂಚಿತ ರೈತರು ನ್ಯಾಯಕ್ಕಾಗಿ ನಡೆಸುತ್ತಿರುವ ಅಹೋರಾತ್ರಿ ಧರಣಿ '5' ನೇ ದಿನಕ್ಕೆ ಕಾಲಿಟ್ಟಿದ್ದು, ಆರಂಭದ ದಿನ ಅಂದರೆ 24 ರಂದು ರಾಷ್ಟ್ರೀಯ ಹೆದ್ದಾರಿ '4' ರ ಮಾಕನೂರು ಕ್ರಾಸ್ ಹತ್ತಿರ ರಸ್ತೆ ತಡೆ ಮಾಡಿ, ಪ್ರತಿಭಟನೆ ಮೂಲಕ ಮಾಕನೂರು ಶಾಖೆಗೆ ತೆರಳಿದಾಗ ಸ್ಥಳಕ್ಕೆ ದಿಢೀರನೇ ಆಗಮಿಸಿದ ಜಿಲ್ಲಾಧಿಕಾರಿ ಸಂಜಯ ಶೆಟ್ಟೆಣ್ಣನವರ ಶೀಘ್ರ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರು. ನಂತರದಲ್ಲಿ ಸಚಿವ ಬಿ.ಸಿ. ಪಾಟೀಲ, ಶಾಸಕ ಅರುಣಕುಮಾರ ಪೂಜಾರ, ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕ ರವೀಂದ್ರಪ್ರಭು ಆಗಮಿಸಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದವರು ತಿರುಗಿಯೂ ಬಂದಿಲ್ಲ.

ರೈತರನ್ನು ಕಡೆಗಣಿಸುತ್ತಿರುವ ಮತ್ತು ಮುಖ್ಯಮಂತ್ರಿ ಹಾಗೂ ಕೃಷಿ ಸಚಿವರ ತವರು ಜಿಲ್ಲೆಯಲ್ಲಿ ರೈತರ ಶೋಷಣೆಯನ್ನು ಖಂಡಿಸಿ, ಇದೇ ದಿನಾಂಕ 31 ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಧರಣಿ ಸತ್ಯಾಗ್ರಹದಿಂದ ಪ್ರತಿಭಟನಾ ನಿರತ ರೈತರು ಮಾಕನೂರು ಕ್ರಾಸ್ ಬಳಿ ತೆರಳಿ ಮತ್ತೆ ಹೆದ್ದಾರಿ ತಡೆ ನಡೆಸಿ, ಜಿಲ್ಲಾಡಳಿತ ಮತ್ತು ಮುಖ್ಯಮಂತ್ರಿಗಳ ಗಮನ ಸೆಳೆಯಲಾಗುವುದೆಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ, ಈರಣ್ಣ ಹಲಗೇರಿ ತಿಳಿಸಿದ್ದಾರೆ.

## ಹರಪನಹಳ್ಳಿಯಲ್ಲಿ ಸಿಇಟಿ ತರಬೇತಿ

ಹರಪನಹಳ್ಳಿ, ಮಾ.28- ಟಿಇಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಲಿರುವ ಕಲ್ಯಾಣ ಕರ್ನಾಟಕ ಭಾಗದ ಆಕಾಂಕ್ಷಿಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕಲ್ಯಾಣ ಕರ್ನಾಟಕ ಅಭಿವೃದ್ದಿ ಮಂಡಳಿ ಸಹಯೋಗದಲ್ಲಿ ಉಚಿತ ಸಿಇಟಿ ತರಬೇತಿ ಏಪ್ರಿಲ್ 1 ರಿಂದ 42 ದಿನಗಳ ಕಾಲ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿವರಕ್ಕೆ ಸಿಇಟಿ ಪರೀಕ್ಷಾ ನೋಡಲ್ ಅಧಿಕಾರಿ ಎಸ್ .ನಾಗರಾಜ (7022157679) ಅವರನ್ನು ನಾಳೆಯೊಳಗೆ ಸಂಪರ್ಕಿಸಿ.


**ಸೈಟುಗಳು ಮಾರಾಟಕ್ಕಿವೆ**
ಹೊಸಬನಶಂಕರಿ ಬಡಾವಣೆಯಲ್ಲಿ 35x50 ಉತ್ತರ, ಪೂರ್ವ ಕಾರ್ನರ್, 30x50 ಪೂರ್ವ, ದಕ್ಷಿಣ ಕಾರ್ನರ್, 40x50 ಉತ್ತರ ಪಶ್ಚಿಮ ಕಾರ್ನರ್, ಬಾಲಾಜಿ ಬಡಾವಣೆಯಲ್ಲಿ 30x50 ಉತ್ತರ ಪೂರ್ವ ಕಾರ್ನರ್.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್‌ಗಳು ಮತ್ತು ಆಯಾ ಬೇಕಾಗಿದ್ದಾರೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ : 98450-35710

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟ್ ಮಾರಾಟಕ್ಕೆ**
ಉತ್ತರ 30×50 (ಅಪ್ರೂವಲ್)
ಪಿ.ಬಿ. ರೋಡ್ ಸಾಯಿ ಹೋಟೆಲ್ ಮುಂದೆ ಸವಣೂರು ಪ್ಲಾಜಾದ ಅಪೋಲೋ ಕಾಂಪೌಂಡ್ ಹಿಂದೆ, ಅವೋಪ ಲೇಔಟ್‌ನಲ್ಲಿ
ಕಿರಣ್ ಬೂಸ್ನೂರ್
98440 63409

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
63639 54459

**PROPERTY FOR SALE**
ASHOKA ROAD, (20x45 Sq.Ft)
Buyers call directly.
84960 49983

**ಬೇಕಾಗಿದ್ದಾರೆ**
ಬಿಲ್ಡಿಂಗ್‌ನಲ್ಲಿ ಎಲೆಕ್ಟ್ರಿಕಲ್ / ವೈರಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವ ಇರುವವರಿಗೆ ಆದ್ಯತೆ. ಆಸಕ್ತರು ಸಂಪರ್ಕಿಸಿ.
99167 01303

**ಮಳಿಗೆ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರೋಡ್,
**ರೂಮ್ ಬಾಡಿಗೆಗೆ ಇದೆ**
ಚಾಮರಾಜ ಪೇಟೆ
82177 72482

**ನೆಲ ಮಳಿಗೆ ಬಾಡಿಗೆಗೆ ಇದೆ**
ಕೆ.ಟಿ.ಜೆ ನಗರದ 8ನೇ ಕ್ರಾಸ್‌ನಲ್ಲಿ 1600 ಚದರಡಿಯುಳ್ಳ ನೆಲ ಮಳಿಗೆಯು ಕಚೇರಿ ಅಥವಾ ಇನ್ನಿತರೆ ವಾಣಿಜ್ಯೋಪಯೋಗಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 94484-78786
98867-34802

**ಕೆಲಸಕ್ಕೆ ಬೇಕಾಗಿದ್ದಾರೆ**
Petrol Bunkನಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ. IOCL BUNK
94821 09492
94807 77338

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2 ಬೆಡ್ ರೂಂ, ಹೊಸ ಮನೆ, ವಿಳಾಸ : ಸಿದ್ಧವೀರಪ್ಪ ಬಡಾವಣೆ, 8 ನೇ ಕ್ರಾಸ್, ಡೋ. ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
ಸಂಪರ್ಕಿಸಿರಿ : 70198 78789
(Pets Not Allowed)

**ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ, ವಾರಕ್ಕೆ ಗಳಿಸಿ 5,000-7,000 ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ.
74065 36901, 87224 83693

**ಸುವರ್ಣಾವಕಾಶ**
ಮನೆಯಲ್ಲೇ ಕುಳಿತು ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ ವಾರಕ್ಕೆ ಗಳಿಸಿ 3,000-5,000, ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ.
87478 23697 / 73533 69458

**ಮಳಿಗೆ ಬಾಡಿಗೆಗೆ ಇದೆ**
11x18 Sqft ಗ್ರೌಂಡ್ ಫ್ಲೋರ್, 1ನೇ ಕ್ರಾಸ್, ಅಶೋಕ ಮೇನ್ ರೋಡ್, ದಾವಣಗೆರೆ.
83109 84050

**ಬೇಕಾಗಿದ್ದಾರೆ**
Call center - Girls
Accountant - Girls
Field Executive - Boys
Sri Kururvatti Basaveshwara Pharma
College Road, P.J. Extn., Davanagere
95139 15520

**ಶಿಕ್ಷಕರು ಬೇಕಾಗಿದ್ದಾರೆ**
ಡಿ ಎಡ್- D ED,
ಬಿಎ, ಬಿಎಡ್- BA BED,
ಬಿಎಸ್‌ಸಿ, ಬಿಎಡ್- BSC,BED.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
94480 21985
90365 59690

**ಸೈಟುಗಳು ಮಾರಾಟಕ್ಕಿವೆ**
ಹೊಸಬನಶಂಕರಿ ಲೇಔಟ್‌ನಲ್ಲಿ 30x50 West, 30x50 South, 30x52 East, 40 ಅಡಿ ರೋಡ್‌ಗಿದೆ. 30x52 ಕಾರ್ನರ್, 60x52 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Telecallers (F), Accoutant (M) Sales Officers (M/F), Works Manager (M), IT Technican, Software Testers /Developers
98444 92888

**ಸ್ಪೋಕನ್ ಇಂಗ್ಲಿಷ್**
ಬೇಸಿಗೆ ಶಿಬಿರ
ಶಾಲಾ ಮಕ್ಕಳಿಗಾಗಿ
97399 22225
ವಿಕಾಸ ಕರಿಯರ್ ಎಜುಕೇಷನ್
ರಾಮ್ ಅಂಡ್ ಕೋ ಸರ್ಕಲ್, ಮೆಡ್‌ಪ್ಲಸ್ ಪಕ್ಕ.

**ತಕ್ಷಣವೇ ಬೇಕಾಗಿದ್ದಾರೆ**
ದಾವಣಗೆರೆಯ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಹಾಗೂ ಫೀಲ್ಡ್ ಆಫೀಸರ್‌ಗಳು & ಎಕ್ಸ್-ಸರ್ವಿಸ್‌ಮೆನ್, ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ತಕ್ಷಣವೇ ಸಂಪರ್ಕಿಸಿ : ಆಕರ್ಷಕ ಸಂಬಳ ಹಾಗೂ ESI & PF ಸೌಲಭ್ಯವಿರುತ್ತದೆ.
86603 98210, 63667 28552
96060 50591

**ತಕ್ಷಣ ಬೇಕಾಗಿದ್ದಾರೆ**
ಟೈಲರಿಂಗ್ ಕೆಲಸ ಮಾಡಲು ಮಹಿಳೆಯರು, ಹುಡುಗರು ಬೇಕಾಗಿದ್ದಾರೆ. ಪಾರ್ಟ್ ಟೈಂ ಕೆಲಸಕ್ಕೆ ಮಹಿಳೆಯರು ಹುಡುಗರು ಬೇಕಾಗಿದ್ದು, ಟೆಲಿಕಾಲರ್ ಬೇಕಾಗಿದ್ದಾರೆ.
88614 38237

**REQUIRED**
Industrial godown 3000 to 4,000 Sq.Ft. with 20 HP power Conatct :
98452 63579

**WANTED**
Banking sector tele caller (Female Only)
Qualification - Any degree / PUC
No. 2257/5 2nd Floor, MCC `A' Block
Beside Togataveera Kalyana Mantapa
96630 72555
Interview time : 11 AM

**ಮಳಿಗೆ ಬಾಡಿಗೆಗೆ/ಲೀಸ್ ಗಿದೆ**
40 ಫೀಟ್ ರೋಡ್, ಡಿಸಿಎಂ ಹಿಂಭಾಗ, ಎಸ್. ಎಸ್. ಹಾಸ್ಪಿಟಲ್ ರೋಡ್, ಶಕ್ತಿ ನಗರ ಸರ್ಕಲ್, ದಾವಣಗೆರೆ ಇಲ್ಲಿ 30x60 ಪೂರ್ವ ಫೇಸ್‌ವುಳ್ಳ ಮಳಿಗೆ ಬಾಡಿಗೆಗೆ / ಲೀಸ್ ಗಿದೆ . ಸಂಪರ್ಕಿಸಿ:
99161 79135
90080 30330

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
35x42 ಅಳತೆಯ 60 ಅಡಿ ರಸ್ತೆ, ನಿಟುವಳ್ಳಿ ಮೇನ್ ರೋಡಿಗೆ, ಕೆ.ಬಿ. ಬಡಾವಣೆಯಲ್ಲಿ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ.
98440 15114, 83100 73553

**ಮನೆ ಬಾಡಿಗೆಗೆ**
ಜಯನಗರದಲ್ಲಿ 15x40 ವಿಸ್ತೀರ್ಣದ ಮೊದಲ ಮಹಡಿ ಪೂರ್ವ ದಿಕ್ಕಿನಲ್ಲಿರುವ ಮನೆ ಬಾಡಿಗೆಗೆ ಹಾಗೂ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ.
ಸಂಪರ್ಕಿಸಿ:
94484 39639

**SUMMER TUITIONS**
FOR SSLC/ PCMB / COMM /ARTS/
100 % Results With solved notes.
SINCHANA ACADEMY
Near RAM & Co Circle, Davangere
90195 80600
85532 78258

**REQUIRED**
Telecalling for ladies
Location: Davangere.
Contact:
8296376716

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಬೇಸಿಗೆ ಶಿಬಿರ**
Basic knowledge, Handwriting, Drawing, Grammar and Spoken English.
ಸಿಂಚನ ಕೋಚಿಂಗ್ ಸೆಂಟರ್
opp. SBI ATM ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
85532 78258.

**ಬೇಕಾಗಿದ್ದಾರೆ**
ಸಸ್ಯಹಾರಿ ಹೋಟೆಲ್ ನಡೆಸಿ experience ಹೊಂದಿರುವ ವ್ಯಕ್ತಿಗಳು ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತರು ಕೂಡಲೇ ಸಂಪರ್ಕಿಸಿ :
87110 04905

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಐಷರ್ ಟ್ರ್ಯಾಕ್ಟರ್ ಶೋ ರೂಂ ನಲ್ಲಿ ಕೆಲಸ ಮಾಡಲು ದಾವಣಗೆರೆ ತಾಲ್ಲೂಕಿಗೆ ಟ್ರ್ಯಾಕ್ಟರ್ ಮಾರಾಟದಲ್ಲಿ 5 ವರ್ಷ ಅನುಭವವುಳ್ಳ ಮಾರಾಟ ಪ್ರತಿನಿಧಿಗಳು - 02 ಬೇಕಾಗಿದ್ದಾರೆ, ಸ್ವಂತ ದ್ವಿಚಕ್ರ ವಾಹನವಿರಬೇಕು, ಲೈಸೆನ್ಸ್ ಇರಬೇಕು. ಸಂಬಳ 12,000/- +Incentive +TA,DA ಕೊಡಲಾಗುವುದು.
ಸಂಪರ್ಕಿಸಿ: ಶಾರದಾ ಆಟೋಸ್
KSRTC ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
sharadaautosdavangere@gmail.com
ಮೊ: 99002 56457

**GPSTR(6-8)**
KAS, PSI, POLICE
ಹೊಸ ಬ್ಯಾಚ್‌ಗಳು ಪ್ರಾರಂಭ
ಬ್ಯಾಚ್ 1 27-03-2022
ಬ್ಯಾಚ್ 2 04-04-2022
ಬ್ಯಾಚ್ 3 11-04-2022
ವಿಷಯ : English, Science, Social
ಧಾರವಾಡ ಮತ್ತು ಬೆಂಗಳೂರಿನ ಉಪನ್ಯಾಸಕರು
WINNERS CAREER ACADEMY
COACHING CENTRE FOR ALL EXAMS
Near Stadium, P.J. Extn., Davangere
9986520992, 9886997892

**ಶ್ರೀ ಘುತ್ತರಕಿ ಭಾಗ್ಯಮ್ಮದೇವಿ ಜ್ಯೋತಿಷ್ಯಾಲಯ**
ಶ್ರೀ ದತ್ತಾತ್ರೇಯ ಉಪಾಸಕರು ಪಂಡಿತ್ ಶ್ರೀ ಭರತ್ ಗುರೂಜಿ
ಮನೆಯಲ್ಲಿ ಅಶಾಂತಿ, ಅನಾರೋಗ್ಯ, ವಿದ್ಯೆ, ಉದ್ಯೋಗ, ವ್ಯಾಪಾರ, ಶತ್ರು ಕಾಟ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲಕ್ಷ್ಮೀ ವಶ, ಭೂಮಿ ವಶ, ವಿದೇಶ ಪ್ರಯಾಣ, ಸಾಲದ ಬಾಧೆ ಇನ್ನೂ ನಿಮ್ಮ ಹಲವು ಸಮಸ್ಯೆಗಳಿಗೆ ಶೀಘ್ರ ಪರಿಹಾರ. ಫೋನಿನ ಮೂಲಕ ಸ್ವರ ಭವಿಷ್ಯದ ನಿಮ್ಮ ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ. ಇಂದೇ ಕರೆ ಮಾಡಿ
9980770791

**ಮನೆಗಳು ಬಾಡಿಗೆಗೆ ಇವೆ**
ಆಂಜನೇಯ ಬಡಾವಣೆ #787/259, ಬಾಪೂಜಿ ಹಾಸ್ಟೆಲ್, ಉದಯಗಿರಿ, ಚಂದ್ರಗಿರಿ ಬಿಲ್ಡಿಂಗ್ ಲೈನ್‌ನಲ್ಲಿ ಇರುವ ಗ್ರೌಂಡ್‌ಫ್ಲೋರ್‌ನಲ್ಲಿ 3BHK ಮನೆ ಮತ್ತು 1st ಫ್ಲೋರ್‌ನಲ್ಲಿ 1BHK, 2 ಮನೆ, ಬೋರ್, ಮುನ್ಸಿಪಾಲಿಟಿ ನೀರು, ಕಾರ್ ಪಾರ್ಕಿಂಗ್, ಬೈಕ್ ಪಾರ್ಕಿಂಗ್ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94488 55643, 99027 81163

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ 40x60 ಉತ್ತರ, ಸಿದ್ಧವೀರಪ್ಪ ಬಡಾವಣೆ 30x70, ಎಂ.ಸಿ.ಸಿ 'A' ಬ್ಲಾಕ್ 44x60 ಪೂರ್ವ. ಸಂಪರ್ಕಿಸಿ :
97418 11964

**ದಂತವೈದ್ಯರು ಬೇಕಾಗಿದ್ದಾರೆ**
ಸುಸಜ್ಜಿತವಾದ ಶ್ರೀ ಸಾಯಿ ಡೆಂಟಲ್ ಕ್ಲಿನಿಕ್ ವಿದ್ಯಾನಗರ ದಾವಣಗೆರೆಯಲ್ಲಿ ಕೆಲಸ ಮಾಡಲು ದಂತ ವೈದ್ಯರು (Dentists) ಕೂಡಲೇ ಬೇಕಾಗಿದ್ದಾರೆ.
94495 66566
95615 89811

**WANTED / ಬೇಕಾಗಿದ್ದಾರೆ**
Male / Female graduate for Billing and Accounts Assistant
Tally knoweldge compulsory.
BAGRECHA TRADING Company,
162, Narasaraja Road, Davanagere-577001.
Send resume by whatsapp
98440 78802
Email:kkb27041973@gmail.com

**ರೊಟ್ಟಿ ಮತ್ತು ಚಪಾತಿ ದೊರೆಯುತ್ತದೆ.**
ಸಂಪರ್ಕಿಸಿ :
63663 27369

**ಪಾಂಪ್ಲೆಟ್ಸ್ ಹಂಚಲು ಯುವಕ/ ಯುವತಿಯರು ಬೇಕಾಗಿದ್ದಾರೆ**
ನೇರ ಪರೀಕ್ಷೆ ಗಳು SSLC, PUC ARTS/COMM/SCI. last date 30/03. BA, BCOM, NTC - ನರ್ಸರಿ ಟೀಚರ್ಸ್ ಟ್ರೇನಿಂಗ್
ವಿಳಾಸ: ಶ್ರೀ ಗಂಗೋತ್ರಿ ಎಜು ಟ್ರಸ್ಟ್ (ರಿ). ಲಾಯರ್ ರೋಡ್. ದಾವಣಗೆರೆ
86602 35013

**ಶಿಕ್ಷಕರು ಬೇಕಾಗಿದ್ದಾರೆ**
ಶ್ರೀ ಗುರುಕುಲ ವಿದ್ಯಾಸಂಸ್ಥೆ, ಸಿ.ಬಿ.ಎಸ್.ಇ ಶಾಲೆ, ತುರ್ಚಘಟ್ಟ. ಗಣಿತ, ವಿಜ್ಞಾನ, ಇಂಗ್ಲಿಷ್, ಗಣಕಯಂತ್ರ ವಿಷಯದಲ್ಲಿ ಪರಿಣಿತಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತಿ ಇರುವವರು, ಈ ನಂಬರ್‌ಗೆ ಸಂಪರ್ಕಿಸಿ.
73386 04513, 73386 04512

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ.**
ಕನ್ನಡ, ಇಂಗ್ಲಿಷ್ ಟೈಪಿಂಗ್ ಮತ್ತು ಆನ್ ಲೈನ್ ವರ್ಕ್ ಮಾಡಲು ತುರ್ತಾಗಿ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಮೊ.99861 13461

**ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ**
ಸಂಬಳ 9000, ಊಟ, ರೂಂ ಉಚಿತ
ಸಂಪರ್ಕಿಸಿ :
97400 98064, 97400 98047

**ಡ್ರೈವರ್ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ OLA , UBER ಕ್ಯಾಬ್‌ಗೆ ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.
ಸಂಪರ್ಕಿಸಿ:
95915 62556
99644 91116



# ಪರೀಕ್ಷಾ ಕೇಂದ್ರಗಳಿಗೆ ಡಿಸಿ ಬೀಳಗಿ ಭೇಟಿ

ದಾವಣಗೆರೆ, ಮಾ.28- ನಗರದ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಾದ ಮೋತಿವೀರಪ್ಪ ಕಾಲೇಜು, ಸರ್ಕಾರಿ ಪ್ರೌಢಶಾಲೆ, ಸೀತಮ್ಮ ಕಾಲೇಜಿಗೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಿಲ್ಲೆಯ 90 ಕೇಂದ್ರಗಳಲ್ಲಿ ಪರೀಕ್ಷೆಗಳು ಸುಗ ಮವಾಗಿ ನಡೆಯುತ್ತಿರುವುದಾಗಿ ಹೇಳಿದರು. ಹರಿಹರ ದಲ್ಲಿ ಎಸ್.ಪಿ, ಚನ್ನಗಿರಿ ಭಾಗದಲ್ಲಿ ಸಿ.ಇ.ಓ ಹಾಗೂ ದಾವಣಗೆರೆ ನಗರದಲ್ಲಿ ತಾವು ಪರೀಕ್ಷಾ ಕೇಂದ್ರಗಳ ಉಸ್ತುವಾರಿ ಗಮನಿಸುತ್ತಿರುವುದಾಗಿ ಹೇಳಿದರು.

ಧಾರ್ಮಿಕ ವಸ್ತ್ರಗಳ ಸಮಸ್ಯೆಗಳು ಎಲ್ಲಿಯೂ ಉದ್ಭವಿಸಿಲ್ಲ ಹಾಗೂ ಆ ವಿಚಾರವಾಗಿ ಪರೀಕ್ಷೆಯಿಂದ ಹೊರಹೋದ ವರದಿಗಳಿಲ್ಲ. ಹೊರ ಹೋಗಲೂ ಸಹ ಬಿಡುವುದಿಲ್ಲ ಎಂದ ಜಿಲ್ಲಾಧಿಕಾರಿ, ಎಲ್ಲರೂ ಪರೀಕ್ಷೆಯೇ ಮುಖ್ಯ ಎಂದು ಆತ್ಮ ವಿಶ್ವಾಸದಿಂದ ಪರೀಕ್ಷೆ ಬರೆಯುತ್ತಿದ್ದಾರೆ ಎಂದರು.

ಎಲ್ಲಾ ಕಡೆಯಲ್ಲೂ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಗಿದ್ದು, ಪ್ರತೀ ಕೇಂದ್ರಕ್ಕೂ ಒಬ್ಬ ಸ್ಕ್ವಾಡ್‌ಗಳನ್ನು ನೇಮಿಸಲಾಗಿದೆ. ವಿದ್ಯಾರ್ಥಿಗಳು ಯಾವುದೇ ಭಯವಿಲ್ಲದೆ ಪರೀಕ್ಷೆ ಬರೆಯುವಂತೆ ಆತ್ಮಸ್ಥೈರ್ಯ ತುಂಬಲಾಗಿದೆ ಎಂದು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ. ಬಸರಗಿ, ಡಿ.ಡಿ.ಪಿ.ಐ ಜಿ.ಆರ್ ತಿಪ್ಪೇಶಪ್ಪ, ಬಿಇಓ ನಿರಂಜನ ಮೂರ್ತಿ, ವಿಷಯ ಪರಿವೀಕ್ಷಕ ಕುಮಾರ ಹನುಮಂತಪ್ಪ ಸಾರಥಿ ಮತ್ತು ಇತರರು ಹಾಜರಿದ್ದರು.

# ಜಿಲ್ಲೆಯಲ್ಲಿ ಕಾರ್ಮಿಕರ ಸಂಘಟನೆಗಳ ಮುಷ್ಕರ




ದಾವಣಗೆರೆ, ಮಾ.28- ರೈತ-ಕಾರ್ಮಿಕ ವಿರೋಧಿ ನೀತಿ ಖಂಡಿಸಿ, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಕರೆ ನೀಡಿದ್ದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ನಗರದಲ್ಲೂ ಯಶಸ್ವಿಯಾಗಿ ನಡೆಯಿತು.

ಜಯದೇವ ವೃತ್ತದಿಂದ ಆರಂಭಿಸಿದ ಪ್ರತಿಭಟನಾ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಶಿವಪ್ಪಯ್ಯ ವೃತ್ತದ ರಸ್ತೆಯಲ್ಲಿ ಬಹಿರಂಗ ಸಭೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜೆಸಿಟಿಯು ಮುಖಂಡ ಆವರಗೆರೆ ಹೆಚ್.ಜಿ. ಉಮೇಶ್ ಅವರು, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ಖಾತ್ರಿಪಡಿಸಬೇಕು. ವಿದ್ಯುಚ್ಛಕ್ತಿ ಮಸೂದೆ ಹಿಂಪಡೆಯಬೇಕು. ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ತಡೆಯಬೇಕು. ಎನ್‌ಎಂಪಿ ರದ್ದುಗೊಳಿಸುವಂತೆ ಒತ್ತಾಯಿಸಿದರು.

ಎಐಟಿಯುಸಿ ಮುಖಂಡ ರಾಘವೇಂದ್ರ ನಾಯರಿ ಮಾತನಾಡಿ, ಆದಾಯ ತೆರಿಗೆ ಪಾವತಿಸದ ಕುಟುಂಬಗಳಿಗೆ ಮಾಸಿಕ 7500 ಆಹಾರ ಮತ್ತು ಆದಾಯ ಬೆಂಬಲ ನೀಡಬೇಕು. ಉದ್ಯೋಗ ಖಾತ್ರಿ ಯೋಜನೆಗೆ ಹೆಚ್ಚಿನ ಅನುದಾನ ನೀಡಿ, ಈ ಯೋಜನೆಯನ್ನು ನಗರ ಪ್ರದೇಶಕ್ಕೂ ವಿಸ್ತರಿಸಬೇಕು. ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡಬೇಕು. ಕಾರ್ಮಿಕ ಕಲ್ಯಾಣ ಮಂಡಳಿಯ ಅಕ್ರಮ ತಡೆಗಟ್ಟಿ, ಬೋಗಸ್ ಕಾರ್ಡ್‌ಗಳನ್ನು ರದ್ದುಪಡಿಸುವಂತೆ ಆಗ್ರಹಿಸಿದರು.

ಎಐಯುಟಿಯುಸಿ ಮುಖಂಡ ಕೈದಾಳೆ ಮಂಜುನಾಥ್ ಮಾತನಾಡಿ, ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತರು ಸೇರಿದಂತೆ ಇತರೆ ಕೆಲಸಗಾರರಿಗೆ ಕನಿಷ್ಠ ವೇತನ ನಿಗದಿಗೊಳಿಸಬೇಕು. ಕೋವಿಡ್ ಮುಂಚೂಣಿ ಕಾರ್ಮಿಕರಿಗೆ ಸೂಕ್ತ ರಕ್ಷಣೆ ಒದಗಿಸುವ ಜೊತೆಗೆ ವಿಮಾ ಸೌಲಭ್ಯ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ತೈಲ ಬೆಲೆ ಏರಿಕೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮಂಜುನಾಥ್ ಒತ್ತಾಯಿಸಿದರು.

ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರಾದ ಆವರಗೆರೆ ಚಂದ್ರು, ಐರಣಿ ಚಂದ್ರು, ಕೆ.ಹೆಚ್. ಆನಂದರಾಜ್, ಆವರಗೆರೆ ವಾಸು, ಯರಗುಂಟೆ ಸುರೇಶ್, ಜಬೀನಾ ಖಾನಂ, ತಿಪ್ಪೇಸ್ವಾಮಿ, ವಿಶ್ವನಾಥ್, ಎಂ.ಬಿ. ಶಾರದಮ್ಮ, ಸರೋಜಮ್ಮ, ಪಿ.ಕೆ. ಲಿಂಗರಾಜ್, ಎಸ್.ಜಯಪ್ಪ, ನಾಗರಾಜ್, ನಾಗೇಶ್ವರಿ, ಸಂಧ್ಯಾ, ಬಿ. ಆನಂದಮೂರ್ತಿ, ತಿಪ್ಪೇಸ್ವಾಮಿ ಮತ್ತಿತರರಿದ್ದರು.

## ಸಿಐಟಿಯು ಪ್ರತಿಭಟನೆ

ದಾವಣಗೆರೆ, ಮಾ. 28- ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಜಿಲ್ಲಾ ಸಮಿತಿ ವತಿಯಿಂದ ನಗರದ ವಿಶ್ವೇಶ್ವರಯ್ಯ ಉದ್ಯಾನ ವನದ ಬಳಿ ಪ್ರತಿಭಟನೆ ನಡೆಸಲಾಯಿತು.

ಔಷಧ ಮಾರಾಟ ಪ್ರತಿನಿಧಿಗಳು, ಎಲ್‌ಐಸಿ ಏಜೆಂಟರು, ಎಲ್‌ಐಸಿ ನೌಕರರು, ಹಾಸ್ಟೆಲ್ ಹೊರಗುತ್ತಿಗೆ ನೌಕರರು, ಕಟ್ಟಡ ಕಾರ್ಮಿಕರು, ಗ್ರಾಮ ಪಂಚಾಯತಿ ನೌಕರರು, ಹಮಾಲಿಗಳು, ಬೀದಿ ಬದಿ ವ್ಯಾಪಾರಿಗಳು, ಬೀಡಿ ಕಾರ್ಮಿಕರು, ಆಶಾ ಕಾರ್ಯಕರ್ತೆಯರು, ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಬೇಕು. ಪೆಟ್ರೋಲಿಯಂ ವಸ್ತುಗಳ ಮೇಲಿನ ಕೇಂದ್ರೀಯ ಅಬಕಾರಿ ತೆರಿಗೆ ಕಡಿಮೆ ಮಾಡಬೇಕು. ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡದ ಪ್ರತಿ ಕುಟುಂಬಕ್ಕೂ 7500 ನೇರ ನಗದು ವರ್ಗಾವಣೆ ಮಾಡಬೇಕು. ಪ್ರತಿ ವ್ಯಕ್ತಿಗೂ ತಲಾ 10 ಕೆಜಿ ಆಹಾರ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಕೆ.ಹೆಚ್. ಆನಂದರಾಜ್, ಗಿರೀಶ್, ವೆಂಕಟೇಶ್, ಶಿವಮೂರ್ತಿ, ಮಹಾದೇವಪ್ಪ, ಹಾಲೇಶ್ ನಾಯಕ, ಏಕಾಂತಪ್ಪ, ರವಿ, ಶ್ರೀನಿವಾಸಮೂರ್ತಿ, ವೆಂಕಟೇಶಪ್ಪ, ಗುಡ್ಡಪ್ಪ, ನೇತ್ರಾವತಿ, ಮಹಾವೀರ ಮತ್ತಿತರರು ಭಾಗವಹಿಸಿದ್ದರು.

# 286 ವಿದ್ಯಾರ್ಥಿಗಳು ಹಾಜರಿ, ಕೇಂದ್ರಕ್ಕೆ ಎಸಿ ಭೇಟಿ




ಮಲೇಬೆನ್ನೂರು, ಮಾ.28- ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆಯಲ್ಲಿ ಸೋಮವಾರ ಆರಂಭವಾದ 10 ನೇ ತರಗತಿ ಪರೀಕ್ಷೆಗೆ 7 ಪ್ರೌಢಶಾಲೆಗಳ 286 ವಿದ್ಯಾರ್ಥಿಗಳು ಹಾಜರಾಗಿದ್ದರು.

ಇಬ್ಬರು ವಿದ್ಯಾರ್ಥಿಗಳು ಗೈರು ಆಗಿದ್ದು, ಪರೀಕ್ಷೆ ಸಂಪೂರ್ಣ ಶಾಂತಿಯುತ ವಾಗಿತ್ತು.

ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸ ಗೌಡರ್ ಅವರು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವುದನ್ನು ವೀಕ್ಷಣೆ ಮಾಡಿದರು ಎಂದು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ ಸಿ.ಜಯಣ್ಣ ತಿಳಿಸಿದರು.

# ಸರ್ಕಾರಿ ನೌಕರರು ಬಂದ್‌ನಲ್ಲಿ ಪಾಲ್ಗೊಳ್ಳದಂತೆ ಹೈಕೋರ್ಟ್ ತಡೆ

ಕೊಚ್ಚಿ, ಮಾ. 28 – ಕೇರಳ ಸರ್ಕಾರಿ ನೌಕರರು ಎರಡು ದಿನಗಳ ಕಾಲದ ಬಂದ್‌ನಲ್ಲಿ ಪಾಲ್ಗೊಳ್ಳದಂತೆ ತಕ್ಷಣವೇ ರಾಜ್ಯ ಸರ್ಕಾರ ನಿರ್ದೇಶನ ನೀಡಬೇಕೆಂದು ಕೇರಳ ಹೈಕೋರ್ಟ್ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿಗಳಾದ ಎಸ್. ಮಣಿಕುಮಾರ್ ಹಾಗೂ ನ್ಯಾಯಮೂರ್ತಿ ಶಾಜಿ ಪಿ. ಚಲಿ ಅವರನ್ನು ಒಳಗೊಂಡ ಪೀಠ ಈ ಆದೇಶ ಹೊರಡಿಸಿದ್ದು, ಉದ್ಯೋಗಿಗಳು ಕರ್ತವ್ಯಕ್ಕೆ ಬರಲು ಸಾಧ್ಯವಾಗುವಂತೆ ವಾಹನಗಳನ್ನು ಬಿಡಬೇಕು ಎಂದು ಹೇಳಿದೆ.

ಚಂದ್ರ ಚೂಡನ್ ನಾಯರ್ ಎಂಬುವವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ, ಮಾರ್ಚ್ 28 ಹಾಗೂ 29ರಂದು ನಡೆಯಲಿರುವ ಮುಷ್ಕರಕ್ಕೆ ಬೆಂಬಲಿಸಲು ನೌಕರರಿಗೆ ಎರಡು ದಿನಗಳ ವೇತನ ಸಹಿತ ರಜೆ ನೀಡಲಾಗಿದೆ ಎಂದು ಹೇಳಿದ್ದರು. ನೌಕರರು ಕಡ್ಡಾಯವಾಗಿ ಹಾಜರಿರಬೇಕು. ಇಲ್ಲವಾದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಮುಷ್ಕರ ಸಂವಿಧಾನ ಬಾಹಿರ ಎಂದು ಘೋಷಿಸಬೇಕು ಎಂದು ನಾಯರ್ ಮನವಿ ಮಾಡಿಕೊಂಡಿದ್ದರು.

ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನೋಟಿಸ್ ಕಳಿಸಿರುವ ಹೈಕೋರ್ಟ್, ನಿಲುವು ತಿಳಿಸುವಂತೆ ಕೇಳಿದೆ.

# 55 ಸಾವಿರಕ್ಕೂ ಹೆಚ್ಚು ನಕಲಿ ಜಾತಿ ಪ್ರಮಾಣ ಪತ್ರ ಪಡೆದಿರುವ ಸಂಗತಿ ಆಂತಕಕಾರಿ ಬೆಳವಣಿಗೆ



ಹೊನ್ನಾಳಿ

ಹೊನ್ನಾಳಿ, ಮಾ.28- ರಾಜ್ಯದಲ್ಲಿ ಒಟ್ಟು 55 ಸಾವಿರಕ್ಕೂ ಹೆಚ್ಚು ನಕಲಿ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ ಎಂಬ ಸಂಗತಿ ನಿಜಕ್ಕೂ ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ರಾಜ್ಯ ಪರಿವರ್ತನಾ ವೇದಿಕೆ ರಾಜ್ಯ ಸಂಚಾಲಕ ಎ.ಡಿ.ಈಶ್ವರಪ್ಪ ಹೇಳಿದರು.

ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಕುಟುಂಬ ವರ್ಗದವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ ಎಂದು ಆರೋಪಿಸಿ ಪ್ರತಿಭಟನೆ ಹಮ್ಮಿಕೊಳ್ಳುವ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಮೀಸಲಾತಿ ವಿರೋಧಿಸುತ್ತಿದ್ದವರೇ ಇಂದು ತಮ್ಮನ್ನು ಒಳಪಂಗಡದ ಮೀಸಲಾತಿಗೆ ಸೇರಿಸಿ ಎಂದು ಬೇಡಿಕೆಯೊಂದಿಗೆ ಹೋರಾಟ ನಡೆಸುತ್ತಿರುವುದು ದುರದೃಷ್ಟಕರ ಸಂಗತಿ ಯಾಗಿದೆ ಎಂದರು. 7600 ಜಾತಿಗಳಿದ್ದು ಅಂಕಿ, ಅಂಶಗಳ ಪ್ರಕಾರ ರಾಜ್ಯದಲ್ಲಿ 3600 ಬೇಡ ಜಂಗಮರಿದ್ದು ಮೀಸಲಾತಿ ಸರ್ಟಿಫಿಕೇಟ್ ಪಡೆಯುವ ಅರ್ಹತೆ ಪಡೆದಿರುವ ಬೇಡ ಜಂಗಮರು ಹೊನ್ನಾಳಿಯಲ್ಲಿ ಯಾರು ಕಂಡುಬರುವುದಿಲ್ಲ.

ಡಾ.ಈಶ್ವರ್‌ನಾಯ್ಕ್ ಮಾತನಾಡಿ, ಎಂ.ಪಿ.ರೇಣುಕಾಚಾರ್ಯ ಅವರ ಒತ್ತಾಯಕ್ಕೆ ಮಣಿದು ನಕಲಿ ಜಾತಿ ಪ್ರಮಾಣ ಪತ್ರ ನೀಡಿರುವ ಅಂದಿನ ಬೆಂಗಳೂರು ಉತ್ತರ ತಾಲ್ಲೂಕಿನ ತಹಸೀಲ್ದಾರ್, ರಾಜಸ್ವ ನಿರೀಕ್ಷಕ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳ ವಿರುದ್ಧ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ದೌರ್ಜನ್ಯ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಬೇಕೆಂದರು.

ಜಿ.ಪಂ. ಮಾಜಿ ಅಧ್ಯಕ್ಷ ಆರ್.ನಾಗಪ್ಪ, ದಲಿತ ಮುಖಂಡ ಕೊಡತಾಳ್ ರುದ್ರೇಶ್ ಮಾತನಾಡಿ, ಇತರರಿಗೆ ಮಾದರಿಯಾಗಬೇಕಿದ್ದ ಎಂಪಿ.ರೇಣುಕಾಚಾರ್ಯ ಅವರು ನಕಲಿ ಜಾತಿ ಪ್ರಮಾಣಪತ್ರ ಪಡೆದು ಅವಳಿ ತಾಲ್ಲೂಕಿನ ಪರಿಶಿಷ್ಟ ಜಾತಿಯವರ ಅನ್ನಕ್ಕೆ ಕನ್ನ ಹಾಕಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಿ.ಪಂ. ಮಾಜಿ ಸದಸ್ಯ ಶಿವರಾಂ ನಾಯ್ಕ್, ತಾ.ಪಂ. ಮಾಜಿ ಸದಸ್ಯ ಪೀರ್ಯಾನಾಯ್ಕ್, ಕ್ಯಾಸಿನಕೆರೆ ಶೇಖರಪ್ಪ, ಅರಕೆರೆ ಕೃಷ್ಣ, ಶಂಕರನಾಯ್ಕ್, ಬೆನಕನಹಳ್ಳಿ ಪರಮೇಶ್, ಸಿದ್ದೇಶ್ ಮಾದಾಪುರ, ಚಂದ್ರಪ್ಪ, ರವಿನಾಯ್ಕ, ರಾಜಶೇಖರ್ ಹಾಗೂ ಇತರರು ಇದ್ದರು.

# ಎಂಪಿಆರ್ ಸಹೋದರಗೆ ನೀಡಿದ ಬೇಡ ಜಂಗಮ

## ಜಾತಿ ಪ್ರಮಾಣ ಪತ್ರ ರದ್ಧತಿಗೆ ಆಗ್ರಹ

ದಾವಣಗೆರೆ, ಮಾ.28- ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತು ಅವರ ಸಹೋದರ ಧಾರಕೇಶ್ವರಯ್ಯ ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ವಾಗೀಶಸ್ವಾಮಿ ಅವರಿಗೆ ನೀಡಿರುವ ಬೇಡ ಜಂಗಮ ಜಾತಿ ಪ್ರಮಾಣ ಪತ್ರ ರದ್ದುಗೊಳಿಸುವವರೆಗೂ ದಲಿತ ಪರ ಸಂಘಟನೆಗಳಿಂದ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ದಲಿತ ಮುಖಂಡ ಹೆಗ್ಗೆರೆ ರಂಗಪ್ಪ ಎಚ್ಚರಿಕೆ ನೀಡಿದರು.

101 ಪರಿಶಿಷ್ಟ ಜಾತಿಗಳಲ್ಲಿ ಬೇಡ ಜಂಗಮ ಸಂವಿಧಾನ ಬದ್ಧವಾಗಿ ಮಾನ್ಯತೆ ಪಡೆದಿಲ್ಲ. ಆದರೆ, ರೇಣುಕಾಚಾರ್ಯ ಅವರ ಸಹೋದರ ಬೇಡ ಜಂಗಮ ಕ್ಷೇಮಾಭಿವೃದ್ಧಿ ಎಂಬ ಸಂಘವನ್ನು ಕಟ್ಟಿಕೊಂಡು ತಾನೇ ಸ್ವಯಂ ಘೋಷಿತ ರಾಜ್ಯಾಧ್ಯಕ್ಷರಾಗಿ ಪರಿಶಿಷ್ಟ ಜಾತಿಯ ಮಾನ್ಯತೆ ಕೊಡಿಸುವ ಪ್ರಯತ್ನ ನಡೆಸುವ ಮೂಲಕ ದಲಿತರ ಅನ್ನವನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ರೇಣುಕಾಚಾರ್ಯ ಹಾಗೂ ವಾಗೀಶ್ ಸ್ವಾಮಿ ಅವರು ನೆಲೆಸಿರುವೆಡೆ ಪ್ರಮಾಣ ಪತ್ರ ಪಡೆಯದೆ ಬೆಂಗಳೂರು ಉತ್ತರದಲ್ಲಿ ಬೇಡ ಜಂಗಮ ಪ್ರಮಾಣ ಪತ್ರ ಪಡೆದಿದ್ದಾರೆ. ಇದೊಂದು ದೊಡ್ಡ ಜಾಲ. ಆ ಮೂಲಕ ದಲಿತರ ಸೌಲಭ್ಯವನ್ನು ಕಿತ್ತುಕೊಳ್ಳುವ ಪ್ರಯತ್ನ ಎಂದು ಅಸಮಾಧಾನ ವ್ಯಕ್ತಪಡಿಸಿದರು.


ಪತ್ರಿಕಾಗೋಷ್ಠಿಯಲ್ಲಿ ದಲಿತ ಸಂಘಟನೆಗಳ ಮುಖಂಡರಾದ ಹೂವಿನಮಡು ಅಂಜಿನಪ್ಪ, ಶ್ರೀನಿವಾಸ್, ದಶರಥ, ಗೋವಿಂದ್, ಎಲ್ ಜಯಪ್ಪ, ತಿಮ್ಮಣ್ಣ, ಶ್ರೀನಿವಾಸ್, ಹನುಮಂತಪ್ಪ, ಶಾಂತಾನಾಯ್ಕ್, ಅರುಣ್‌ಕುಮಾರ್, ಪವನ್‌ಕುಮಾರ್ ಸೇರಿದಂತೆ ಇತರರು ಇದ್ದರು.

# ಹರಿಹರ ತಾಲ್ಲೂಕಿಗೆ ಇಂದು ಎಸಿಬಿ ಭೇಟಿ

ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಇಂದು ಹರಿಹರ ತಾಲ್ಲೂಕಿಗೆ ಭೇಟಿ ನೀಡಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್ ಕೌಲಾಪೂರೆ ಇಂದು ಅವರು ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30ರವರೆಗೆ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರ ದೂರು, ಅಹವಾಲುಗಳನ್ನು ಸ್ವೀಕರಿಸುವರು, ದೂರುಗಳನ್ನು ಪ್ರಪತ್ರ-1 ಮತ್ತು 2ರಲ್ಲಿ ಅಫಿಡೆವಿಟ್‌ನೊಂದಿಗೆ ಸಲ್ಲಿಸಬಹುದು. ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದ್ದರೆ ಅಂತಹ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಅಧೀಕ್ಷಕರು ತಿಳಿಸಿದ್ದಾರೆ.

# ಕೊಟ್ಟೂರು ತಾಲ್ಲೂಕು ಕಸಾಪ ನೂತನ ಅಧ್ಯಕ್ಷರಾಗಿ ದೇವರಮನಿ ಕೊಟ್ರೇಶ್



ಕೊಟ್ಟೂರು, ಮಾ.28- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ದೇವರಮನಿ ಕೊಟ್ರೇಶ್ ಆಯ್ಕೆಯಾಗಿದ್ದಾರೆ. ತಾಲ್ಲೂಕು ಘಟಕಕ್ಕೆ ನೂತನ ಕಾರ್ಯಕಾರಿ ಸಮಿತಿ ರಚಿಸಲಾಗಿದ್ದು ಅಂಗಡಿ ಪಂಪಾಪತಿ ಹಾಗೂ ಬಸಾಪುರ ಅರವಿಂದ್ ಅವರನ್ನು ಗೌರವ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ. ಬಿ.ಪಿ. ಮಂಜುನಾಥ, ಎಚ್. ಅಜ್ಜಣ್ಣ, ಬಂಜಾರ ನಾಗರಾಜ್, ತಿಪ್ಪೇಸ್ವಾಮಿ, ಎಸ್.ಎಂ. ನಳಿನ, ಪದ್ಮ ಜಾಗಟಗೆರೆ, ಈಶ್ವರಪ್ಪ ತುರೆಕಾಣಿ, ಎಸ್.ಎಂ. ಗುರುಪ್ರಸಾದ್, ಬಿ.ಎಂ. ಗಿರೀಶ್, ಇಷಾಕ್‌ಸಾಬ್ ಇವರನ್ನು ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಲಾಗಿದೆ.

# ಅಲ್ಪಸಂಖ್ಯಾತರ ಗುರುತಿಸುವ ಮಾರ್ಗಸೂಚಿಗೆ ಸೂಚನೆ

(1ನೇ ಪುಟದಿಂದ) ಅವರನ್ನು ಒಳಗೊಂಡ ಪೀಠ, ಅರ್ಜಿಯ ವಿಚಾರಣೆಯನ್ನು ಮಾ. 10ಕ್ಕೆ ನಿಗದಿ ಪಡಿಸಿದೆ.

ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ದಾಖಲಿಸಿರುವ ಪ್ರಮಾಣ ಪತ್ರವನ್ನು ತಾವು ಪರಿಶೀಲಿಸಿಲ್ಲ. ಹೀಗಾಗಿ ಸಮಯ ನೀಡಬೇಕು ಎಂದು ಕೇಳಿದ್ದರು. ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ, ಯಾವುದೇ ಧರ್ಮವನ್ನು ಅಲ್ಪ ಸಂಖ್ಯಾತ ಎಂದು ರಾಜ್ಯಗಳೂ ಘೋಷಿಸಬಹುದು ಎಂದು ತಿಳಿಸಿತ್ತು.

# ಶಾಸಕ ರೇಣುಕಾಚಾರ್ಯ ಗಡೀಪಾರಿಗೆ ಬಿಎಸ್‌ಪಿ ಆಗ್ರಹ




ದಾವಣಗೆರೆ, ಮಾ.28- ಬೇಡ ಜಂಗಮ ಜಾತಿ ಪ್ರಮಾಣ ಪತ್ರ ಪಡೆದಿರುವ ಶಾಸಕ ಎಂ.ಪಿ ರೇಣುಕಾಚಾರ್ಯ ಅವರನ್ನು ವಿಧಾನಸಭಾ ಸದಸ್ಯತ್ವದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ, ಬಹುಜನ ಸಮಾಜ ಪಕ್ಷದಿಂದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಪಕ್ಷದ ಜಿಲ್ಲಾಧ್ಯಕ್ಷ ಹೆಚ್. ಮಲ್ಲೇಶ್, ಹುಟ್ಟಿ ನಿಂದ ಹಿಂದೂ ಲಿಂಗಾಯತ ಜಂಗಮ ರಾಗಿ, ರಾಜಕಾರಣಕ್ಕಾಗಿ ಹಾಗೂ ಸರ್ಕಾರಿ ಸೌಲಭ್ಯಕ್ಕಾಗಿ ಬೇಡ ಜಂಗಮರು ಎಂದು ಎಂ.ಪಿ ರೇಣುಕಾಚಾರ್ಯ ಹಾಗೂ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಬಿ.ಎಂ. ವಾಗೀಶಸ್ವಾಮಿ ನಕಲಿ ಪ್ರಮಾಣ ಪತ್ರ ಪಡೆದು ಪರಿಶಿಷ್ಟರಿಗೆ ಅನ್ಯಾಯ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೇಡ ಜಂಗಮರು ಕೆಟಗರಿ 3ಎ ನಲ್ಲಿ ಬರುತ್ತಾರೆ. ಬೇಡ ಜಂಗಮರು ವೀರಶೈವ ಜಂಗಮರಲ್ಲ. ಅವರೆಲ್ಲ ಆಂಧ್ರ ಮೂಲದಿಂದ ವಲಸೆ ಬಂದಿದ್ದು, ಅವರು ಮಾದಿಗ ಅಥವಾ ಹೊಲೆಯ ಜಾತಿ ಜನರಿಗೆ ಮಾತ್ರ ಧರ್ಮಗುರುಗಳು. ಆದರೆ ಈಗ ನಕಲಿ ಪ್ರಮಾಣ ಪತ್ರ ಪಡೆದು ಪರಿಶಿಷ್ಟರ ಸೌಲಭ್ಯ ಕಿತ್ತುಕೊಳ್ಳಲು ಹುನ್ನಾರ ನಡೆಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಎಂ.ಪಿ. ರೇಣುಕಾಚಾರ್ಯ ಹುಟ್ಟಿನಿಂದ ಲಿಂಗಾಯತರು. ಆದರೆ, ಅವರಿಗೆ ಜನಿಸಿದ ಮಗಳು ಎಂ.ಆರ್. ಚೇತನ ಅಸ್ಪೃಶ್ಯ ಜಾತಿಯ ನಕಲಿ ಬೇಡ ಜಂಗಮಳಾಗಿದ್ದು ಹೇಗೆ? ಅವರ ಮಗ ಅಮೇರಿಕದಲ್ಲಿದ್ದು ಲಿಂಗಾಯತ ತಂದೆಯ ಮಗನಾದ ಹಾಗೂ ರೇಣುಕಾಚಾರ್ಯರ ಸಹೋದರ ದ್ವಾರಕಾನಾಥಯ್ಯ ನಕಲಿ ಬೇಡ ಜಂಗಮರಾಗಿದ್ದು ಹೇಗೆ? ಎಂದು ಪ್ರಶ್ನಿಸಿದರು.

ಬೇಡ ಜಂಗಮ ವಂಶದವರಾದ ಮಲೇಬೆನ್ನೂರಿನ ವಾಗೀಶ್‌ಸ್ವಾಮಿ ಅವರು ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಸ್ಪರ್ಧಿಸುವಾಗ ಲಿಂಗಾಯತನೆಂದು ಸಾಮಾನ್ಯ ಕ್ಷೇತ್ರದಲ್ಲಿ ಜಯ ಗಳಿಸಿದ್ದು, ಈಗ ಮಾಯಾಕೊಂಡ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧಿಸಲು ಬೇಡಜಂಗಮನೆಂದು ಹೇಳಿಕೊಂಡು ಅಸ್ಪೃಶ್ಯ ಸಮುದಾಯದವರಿಗೆ ಇರುವ ಒಂದು ಕ್ಷೇತ್ರವನ್ನು ಕೂಡ ಕಸಿದುಕೊಳ್ಳುವ ಹುನ್ನಾರ ನಡೆಸಿದ್ದಾರೆ. ಆದ್ದರಿಂದ ರೇಣುಕಾಚಾರ್ಯ ಕುಟುಂಬ ಮತ್ತು ವಾಗೀಶ ಸ್ವಾಮಿಯ ಬೇಡ ಜಂಗಮ ಸರ್ಟಿಫಿಕೆಟನ್ನು ರದ್ದುಪಡಿಸಬೇಕು. ಎಂ.ಪಿ. ರೇಣುಕಾಚಾರ್ಯರನ್ನು ಪರಿಶಿಷ್ಟರ ದೌರ್ಜನ್ಯ ಕಾಯ್ದೆಯಡಿ ಬಂಧಿಸಿ, ರಾಜ್ಯದಿಂದಲೇ ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಂ. ಚಂದ್ರಪ್ಪ, ಕರಿಬಸಪ್ಪ, ಪರಶುರಾಮ್, ಚನ್ನಬಸಪ್ಪ, ಮೈಲಾರಪ್ಪ, ಶಾಂತಪ್ಪ, ಹೆಚ್. ಸುಜಾತ ಮತ್ತಿತರರು ಹಾಜರಿದ್ದರು.

# ಪರಿಶಿಷ್ಟರ ಪ್ರಮಾಣ ಪತ್ರಕ್ಕೆ ಆಗ್ರಹ

ಬೇಡ ಜಂಗಮ ಜಾತಿ


ದಾವಣಗೆರೆ, ಮಾ.28- ರಾಜ್ಯದಲ್ಲಿ ಬೇಡ ಜಂಗಮ ಜಾತಿಗೆ ಪರಿಶಿಷ್ಟರ ಪ್ರಮಾಣ ಪತ್ರ ಕೊಡಿ. ಇಲ್ಲವೇ ರಾಜ್ಯಾದ್ಯಂತ ಎಲ್ಲ ಪ್ರಮಾಣ ಪತ್ರಗಳನ್ನು ರದ್ದು ಪಡಿಸಲಿ. ಈ ನಿಟ್ಟಿನಲ್ಲಿ ಸರ್ಕಾರ ಒಂದು ಅಂತಿಮ ನಿರ್ಧಾರಕ್ಕೆ ಬರಬೇಕಾಗಿದೆ ಎಂದು ಬೇಡ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಹೊನ್ನಾಳಿ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಗುರುಪಾದಯ್ಯ ಮಠದ್ ತಿಳಿಸಿದರು.

ಶತಶತಮಾನಗಳಿಂದ ಧಾರ್ಮಿಕ ಭಿಕ್ಷೆಯಿಂದಲೇ ಹೀನಾಯವಾಗಿ ಜೀವನ ಸಾಗಿಸುವ ಬೇಡಜಂಗಮ ಸಮಾಜ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ಕಾನೂನುಬದ್ಧವಾಗಿ ಪಡೆಯುತ್ತಿದ್ದೇವೆ. ಆದರೆ ಮತ್ತೊಬ್ಬರ ಹಕ್ಕನ್ನು ನಾವು ಕಸಿದುಕೊಳ್ಳುತ್ತಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಬೇಡ ಜಂಗಮರು ಯಾರೂ, ವೀರಶೈವ ಜಂಗಮರು ಯಾರು ಎನ್ನುವುದು ಕುರಿತಂತೆ ಈಗಾಗಲೇ ಸರ್ಕಾರ 3 ಸುತ್ತೋಲೆಗಳನ್ನು ಹೊರಡಿಸಿದೆ. ಅದರಂತೆ ನಾವು ಪರಿಶಿಷ್ಟ ಜಾತಿಯ ಪ್ರಮಾಣ ಪತ್ರ ಪಡೆದಿದ್ದೇವೆ. ಆದರೆ ಕೆಲವರು ಇದನ್ನು ವಿರೋಧಿಸುತ್ತಿದ್ದಾರೆ ಇದು ಸರಿಯಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಕೆ.ಪರಮೇಶ್ವರಯ್ಯ, ರೇವಣಸಿದ್ದಯ್ಯ, ಗುರುಪ್ರಸಾದ್, ಉಮೇಶ್ ಹಿರೇಮಠ ಹಾಗು ಇತರರು ಇದ್ದರು.

# ಎಸ್ಸೆಸ್ಸೆಲ್ಸಿ : ಕಾಂಗ್ರೆಸ್ ಶುಭ ಹಾರೈಕೆ



ದಾವಣಗೆರೆ, ಮಾ.28- ನಗರದ ಸೀತಮ್ಮ ಜ್ಯೂನಿಯರ್ ಕಾಲೇಜು ಮತ್ತು ವಿನೋಬನಗರದ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಪ್ರೌಢಶಾಲೆ ಸೇರಿದಂತೆ, ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದ್ದ ದಕ್ಷಿಣ ವಲಯ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ನಗರ ಪಾಲಿಕೆಯ ಮಾಜಿ ವಿಪಕ್ಷ ನಾಯಕ ಎ.ನಾಗರಾಜ್ ಮತ್ತು ಇತರರು ವಿದ್ಯಾರ್ಥಿಗಳಿಗೆ ಗುಲಾಬಿ ಹೂವು ನೀಡುವುದರ ಮೂಲಕ ಶುಭ ಹಾರೈಸಿದರು.

# ಎಂಪಿಆರ್ ಸಹೋದರ ಧಾರುಕೇಶ್ವರಯ್ಯಗೆ ದಲಿತ ಮುಖಂಡರಿಂದ ಘೇರಾವ್

## ಬೇಡ ಜಂಗಮ ಜಾತಿ ಪ್ರಮಾಣ ಪತ್ರ ಸಂಬಂಧ ವಾಗ್ವಾದ



ದಾವಣಗೆರೆ, ಮಾ.28- ಬೇಡ ಜಂಗಮ ಜಾತಿ ಪ್ರಮಾಣ ಪತ್ರದ ವಿವಾದಕ್ಕೆ ಸಂಬಂಧಿಸಿ ದಂತೆ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಸಹೋದರ ಡಾ. ಎಂ.ಪಿ. ಧಾರಕೇಶ್ವರಯ್ಯಗೆ ಮುತ್ತಿಗೆ ಹಾಕಿದ ದಲಿತ ಸಂಘಟನೆಗಳ ಮುಖಂಡರು ವಾಗ್ವಾದ ಮಾಡಿದ ಘಟನೆ ನಗರದ ವರದಿಗಾರರ ಕೂಟದ ಮುಂಭಾಗದಲ್ಲಿ ಇಂದು ನಡೆಯಿತು.

ಪತ್ರಿಕಾಗೋಷ್ಠಿ ಮುಗಿಸಿದ ತಕ್ಷಣ ಹೊರಡುವಂತೆ ಧಾರಕೇಶ್ವರಯ್ಯ ಮತ್ತು ಇತರರಿಗೆ ಸ್ಥಳದಲ್ಲಿ ಬಂದೋಬಸ್ತ್ ಗೆ ಹಾಜರಿದ್ದ ಕರ್ತವ್ಯ ನಿರತ ಪೊಲೀಸರು ಸೂಚಿಸಿದ್ದರು. ಆದರೆ, ಪತ್ರಿಕಾಗೋಷ್ಠಿ ಮುಗಿಸಿ ಹೊರಬಂದ ಅಖಿಲ ಕರ್ನಾಟಕ ಡಾ. ಅಂಬೇಡ್ಕರ್ ಬೇಡ ಜಂಗಮ ಪರಿಶಿಷ್ಟ ಜಾತಿ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಧಾರುಕೇಶ್ವರಯ್ಯ ಅವರು ಜಂಗಮ ಸಮಾಜದ ಪದಾಧಿಕಾರಿಗಳೊಂದಿಗೆ ಚರ್ಚಿಸುತ್ತಿದ್ದರು. ಈ ವೇಳೆ ದಾರುಕೇಶಯ್ಯ ಅವರ ಬಳಿ ಧಾವಿಸಿದ ಡಿಎಸ್ಸೆಸ್, ಮಾದಿಗ ಸಮಾಜ, ಭೋವಿ ಸಮಾಜ ಸೇರಿದಂತೆ ವಿವಿಧ ದಲಿತ ಪರ ಸಂಘಟನೆಗಳ ಮುಖಂಡರು ಘೇರಾವ್ ಹಾಕಿ ವಾಗ್ವಾದಕ್ಕಿಳಿದರು.

ವೀರಶೈವ ಜಂಗಮ ಸಮುದಾಯದ ಮೇಲ್ವರ್ಗದವರಾಗಿದ್ದರೂ ಸುಳ್ಳು ಬೇಡ ಜಂಗಮ ಪ್ರಮಾಣ ಪತ್ರ ಪಡೆದಿದ್ದು ಅಕ್ಷಮ್ಯ. ಆ ಮೂಲಕ ದಲಿತರು, ಶೋಷಿತರ ಅನ್ನ, ಅವಕಾಶ ಕಸಿಯುವ ಮತ್ತು ಪರಿಶಿಷ್ಟ ಜಾತಿ ಜನರಿಗೆ ಅನ್ಯಾಯ ಮಾಡಲು ಹೊರಟಿದ್ದೀರಾ ಎಂದು ಕಿಡಿಕಾರಿದರು.

ತಕ್ಷಣವೇ ಎಚ್ಚೆತ್ತ ಪೊಲೀಸರು, 112 ವಿಶೇಷ ಪೊಲೀಸ್ ವಾಹನದಲ್ಲಿ ಧಾರಕೇಶ್ವರಯ್ಯ ಕೂರಿಸಿ, ಭದ್ರತೆ ಒದಗಿಸಿದರು. ಧಾರುಕೇಶ್ವರಯ್ಯನವರ ಜೊತೆಗೆ ಚರ್ಚೆಗೆ ಬಿಡುವಂತೆ ದಲಿತ ಮುಖಂಡರು ಪಟ್ಟು ಹಿಡಿದು, ಎಳೆದಾಡಲಾರಂಭಿಸಿದರು. ಅಷ್ಟರಲ್ಲಿ ಸ್ಥಳಕ್ಕೆ ಧಾವಿಸಿದ ಕೆಟಿಜೆ ನಗರ ವೃತ್ತ ನಿರೀಕ್ಷಕ ಗುರುಬಸವರಾಜ, ಸಬ್ ಇನ್‌ಸ್ಪೆಕ್ಟರ್ ಪ್ರಭು ಡಿ. ಕೆಳಗಿನ ಮನೆ ಪ್ರತಿಭಟನೆಗೆ ಮುಂದಾಗಿದ್ದ ದಲಿತ ಮುಖಂಡರನ್ನು ಸಮಾಧಾನಿಸಲು ಪ್ರಯತ್ನಿಸಿದರು.

ಕೆಲ ದಲಿತ ಮುಖಂಡರು ಪೊಲೀಸ್ ವಾಹನದ ಮುಂದೆ ಧರಣಿ ಕುಳಿತರೆ, ಮತ್ತೆ ಕೆಲವರು ಪೊಲೀಸ್ ಅಧಿಕಾರಿಗಳ ಜೊತೆ ವಾಗ್ವಾದ ನಡೆಸಿದರು. ಧಾರುಕೇಶ್ವರಯ್ಯ ಅವರನ್ನು ಹತ್ತಿಸಿಕೊಂಡ ಪೊಲೀಸ್ ಜೀಪು ಕೆಟಿಜೆ ನಗರ ಠಾಣೆಯತ್ತ ಸಾಗಿತು. ಅದನ್ನು ಗಮನಿಸಿದ ದಲಿತ ಮುಖಂಡರು ಜೀಪ್ ಅನ್ನು ಬೆನ್ನು ಹತ್ತಿದರು. ಆಗ ಸಿಪಿಐ ಗುರುಬಸವರಾಜ, ಎಸ್‌ಐ ಪ್ರಭು ಕೆಳಗಿನಮನೆ ದಲಿತ ಮುಖಂಡರಿಗೆ ಸಮಾಧಾನಪಡಿಸಿ, ಮನವೊಲಿಸುವ ಮೂಲಕ ಪರಿಸ್ಥಿತಿ ತಿಳಿಗೊಂಡಿತು.

ನಂತರ ಕೆಟಿಜೆ ನಗರ ಪೊಲೀಸ್ ಠಾಣೆಗೆ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಸಹ ಭೇಟಿ ನೀಡಿದ ನಂತರವಷ್ಟೇ ಧಾರಕೇಶ್ವರಯ್ಯ ಅವರನ್ನು ಪೊಲೀಸ್ ಭದ್ರತೆಯಲ್ಲಿ ನಗರದಿಂದ ಹೊರಗೆ ಕಳಿಸಲಾಯಿತು.

ದಲಿತ ಮುಖಂಡರಾದ ಹೂವಿನಮಡು ಅಂಜಿನಪ್ಪ, ಹೆಗ್ಗೆರೆ ರಂಗಪ್ಪ, ಕಬ್ಬಳ್ಳಿ ಮೈಲಪ್ಪ, ಗುಮ್ಮನೂರು ರಾಮಚಂದ್ರಪ್ಪ, ರಾಮ ನಗರ ಜಯಪ್ಪ, ಅಳಗವಾಡಿ ನಿಂಗರಾಜ್, ನಾಗನೂರು ರಾಜು, ಗಾಂಧಿನಗರ ರಾಜಪ್ಪ, ಆನಗೋಡು ಪ್ರಶಾಂತ, ಚಿಕ್ಕನಹಳ್ಳಿ ಹನುಮಂತಪ್ಪ, ಮೇಗಳಗೆರೆ ಮಂಜುನಾಥ, ಭೋವಿ ಸಮಾಜದ ಮುಖಂಡರಾದ ಹನುಮಂತ, ಆಟೋ ತಿಮ್ಮಣ್ಣ, ಡಿವೈಎಫ್‌ಐ ಶ್ರೀನಿವಾಸ ಸೇರಿದಂತೆ ಇತರರು ಇದ್ದರು.

ಉದ್ಯೋಗಾವಕಾಶ

ಜಿಲ್ಲೆಯ ಪ್ರತಿಷ್ಠಿತ ಕಂಪನಿಯಾದ ಬನ್ಸಾಲ್ ಆರಾಧ್ಯ ಸ್ಟೀಲ್ ಪ್ರೈ.ಲಿ.,ನಲ್ಲಿ ITI, PUC, SSLC, ಆದವರಿಗೆ ಉದ್ಯೋಗಾವಕಾಶವಿದೆ.
ತಮ್ಮ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಿ :
ವಯಸ್ಸು : 18 ರಿಂದ 30ರ ಒಳಗೆ
ಸಂದರ್ಶನದ ಸಮಯ : ಬೆಳಗ್ಗೆ 10.00 ರಿಂದ 4.00

ಬನ್ಸಾಲ್ ಆರಾಧ್ಯ ಸ್ಟೀಲ್ ಪ್ರೈ.ಲಿ.,
ಹಾಲವರ್ತಿ, NH4, ಆನಗೋಡು, ದಾವಣಗೆರೆ.
ಫೋ. : 88846 20546, 91135 92331



# ಹೃದಯಪೂರ್ವಕ ಕೃತಜ್ಞತೆಗಳು







ಜಾತಿ, ಮತ, ಪಂಥಗಳನ್ನು ಮೀರಿ ಸಾಮರಸ್ಯ, ಭಾವೈಕ್ಯತೆಯ ಸಂದೇಶ ಸಾರಿದ ವೀರಶೈವ ಧರ್ಮದ
'ಪ್ರಥಮಾಚಾರ್ಯ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಆಚರಣೆ'ಯನ್ನು
ಮಾಡುವ ಐತಿಹಾಸಿಕ ನಿರ್ಧಾರ ಕೈಗೊಂಡಿರುವ ರಾಜ್ಯ ಸರ್ಕಾರದ ನಿಲುವು ಸ್ವಾಗತಾರ್ಹ.
ಸಕಲ ಜೀವಾತ್ಮರಿಗೆ ಒಳಿತನ್ನೇ ಬಯಸಿದ ಧರ್ಮ ವೀರಶೈವ. ಪರಶಿವನ ಸದ್ಯೋಜಾತ ಮುಖದಿಂದ
ಕೊಲನಪಾಕ ಶ್ರೀ ಸೋಮೇಶ್ವರ ಮಹಾಲಿಂಗದಿಂದ ಅವತರಿಸಿದ
'ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ'ವನ್ನು
ರಾಜ್ಯ ಸರ್ಕಾರದಿಂದ ಆಚರಿಸಲು ದೃಢ ನಿರ್ಧಾರ ಕೈಗೊಂಡಿರುವ
ಮುಖ್ಯಮಂತ್ರಿಗಳಾದ **ಶ್ರೀಯುತ ಬಸವರಾಜ ಬೊಮ್ಮಾಯಿ**
ಕನ್ನಡ ಮತ್ತು ಸಂಸ್ಕೃತಿ ಸಚಿವರಾದ **ಶ್ರೀಯುತ ವಿ.ಸುನೀಲ್ ಕುಮಾರ್**
ಅಖಿಲ ಭಾರತ ವೀರಶೈವ ಮಹಾ ಸಭಾದ ರಾಷ್ಟ್ರೀಯ ಅಧ್ಯಕ್ಷರೂ, ಹಿರಿಯ ಶಾಸಕರೂ ಆಗಿರುವ
**ಶ್ರೀಯುತ ಡಾ|| ಶಾಮನೂರು ಶಿವಶಂಕರಪ್ಪ**

## ಅವರುಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಮೌಲ್ಯಾಧಾರಿತ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಧಾರೆಗಳು
ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಪೂರಕವಾಗಿವೆ. ಸರ್ಕಾರ ಪ್ರತಿ ವರ್ಷ ಆಚರಿಸುವ
ಈ ನಿರ್ಧಾರಕ್ಕೆ ವೀರಶೈವ ಧರ್ಮ ಬಾಂಧವರು ಅಷ್ಟೇ ಅಲ್ಲ ಸಕಲರೂ ಸಂತಸಗೊಂಡಿದ್ದಾರೆ.

### 'ಶ್ರೀ ರೇಣುಕಾ ರಸ್ತೆ' : ಕೃತಜ್ಞತೆಗಳು

ದಾವಣಗೆರೆ ಮಹಾನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನವನ್ನು ಹಾದು ಹೋಗುವ ವರ್ತುಲ ರಸ್ತೆಗೆ
'ಶ್ರೀ ರೇಣುಕಾ ರಸ್ತೆ' ಎಂದು ನಾಮಕರಣ ಮಾಡಲು, ದಾವಣಗೆರೆ ಮಹಾನಗರ ಪಾಲಿಕೆಗೆ ಶಿಫಾರಸ್ಸು ಮಾಡಿದ
ಭಾರತ ಸರ್ಕಾರದ ಮಾಜಿ ಸಚಿವರೂ, ಲೋಕಸಭಾ ಸದಸ್ಯರೂ, ಹಿರಿಯ ಮುತ್ಸದ್ಧಿಗಳೂ ಆದ
**ಶ್ರೀಯುತ ಜಿ.ಎಂ. ಸಿದ್ದೇಶ್ವರ** ಅವರಿಗೂ ಮತ್ತು ದಾವಣಗೆರೆ ಜಿಲ್ಲಾ ಮಾಜಿ ಉಸ್ತುವಾರಿ ಸಚಿವರೂ,
ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರೂ, ಹಿರಿಯ ಮುತ್ಸದ್ಧಿಗಳೂ ಆದ
**ಶ್ರೀಯುತ ಎಸ್.ಎ. ರವೀಂದ್ರನಾಥ್** ಅವರಿಗೂ, ಸದರಿ ರಸ್ತೆಗೆ 'ಶ್ರೀ ರೇಣುಕಾ ರಸ್ತೆ' ಎಂದು ನಾಮಕರಣ ಮಾಡಲು
ಒಮ್ಮತದಿಂದ ತೀರ್ಮಾನ ಕೈಗೊಂಡು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ದಾವಣಗೆರೆ ಮಹಾನಗರ ಪಾಲಿಕೆಯ
ಮಾಜಿ ಮಹಾಪೌರರೂ, ಹಾಲಿ ಸದಸ್ಯರೂ ಆಗಿರುವ **ಶ್ರೀಯುತ ಎಸ್.ಟಿ. ವೀರೇಶ್** ಅವರಿಗೂ,
ದಾವಣಗೆರೆ ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷರಾದ **ಶ್ರೀಯುತ ದೇವರಮನೆ ಶಿವಕುಮಾರ್** ಅವರಿಗೂ
ಪಾಲಿಕೆ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷರೂ, ಹಾಲಿ ಸದಸ್ಯರೂ ಆಗಿರುವ **ಶ್ರೀಯುತ ಪ್ರಸನ್ನಕುಮಾರ್** ಅವರಿಗೂ,

**ಪಾಲಿಕೆಯ ಎಲ್ಲಾ ಸರ್ವ ಸದಸ್ಯರಿಗೂ ದಾವಣಗೆರೆ ಜಿಲ್ಲೆಯ ಸಮಸ್ತ ವೀರಶೈವ ಲಿಂಗಾಯತ ಸಮಾಜ ಬಾಂಧವರ ಪರವಾಗಿ ಹೃದಯಪೂರ್ವಕ ಧನ್ಯವಾದಗಳು.**



**ಶ್ರೀ ಎನ್.ಎ. ಮುರುಗೇಶ್**
ಅಧ್ಯಕ್ಷರು, ದಾವಣಗೆರೆ-ಹರಿಹರ
ಅರ್ಬನ್ ಸಹಕಾರ ಬ್ಯಾಂಕ್

**ಶ್ರೀ ಬಾ.ಮ. ಬಸವರಾಜಯ್ಯ**
ಮಾಜಿ ಸದಸ್ಯರು, ಮಹಾನಗರ ಪಾಲಿಕೆ
ಹಿರಿಯ ಸಾಹಿತಿಗಳು

**ಶ್ರೀ ಎಸ್.ಜಿ. ಉಳುವಯ್ಯ**
ಮಾಲೀಕರು : ಶ್ರೀ ಚನ್ನಬಸವೇಶ್ವರ
ರೈಸ್ ಟೆಕ್, ಬಸಾಪುರ ರಸ್ತೆ, ದಾವಣಗೆರೆ.

**ಶ್ರೀ ಹೆಚ್.ಎಂ. ರುದ್ರಮುನಿಸ್ವಾಮಿ**
ಮಾಜಿ ಅಧ್ಯಕ್ಷರು, ಸ್ಥಾಯಿ ಸಮಿತಿ
ದಾವಣಗೆರೆ, ಮಹಾನಗರ ಪಾಲಿಕೆ

**ಶ್ರೀ ಕೆ.ಎಂ. ಚನ್ನಬಸಯ್ಯ**
ಕೋಶಾಧ್ಯಕ್ಷರು,
ಪಂಚಾಚಾರ್ಯ ಸೇವಾ ಟ್ರಸ್ಟ್

# ದಾವಣಗೆರೆ ಜಿಲ್ಲಾ ಜಂಗಮ ಸಮಾಜ, ದಾವಣಗೆರೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte